PDF Compressor Free Version

ಕೆ.ಎಂ.ಎಫ್

RNI NO : 29773/77 Registered No/RNP/KA/BGS-103/2015-17
Posted at Bangalore PSO Mysore Road BG 560 026
on 28th of every month
Licensed to post without Pre-payment WPP No.-3

# ಕ್ಷೀರಸಾಗರ

KSHEERASAGAR MONTHLY

ಸಂಪುಟ Vol. : 38 | ಡಿಸೆಂಬರ್ December - 2016 | ಸಂಚಿಕೆ Issue: 7 | ಪುಟ Pages 12

## ಬರಗಾಲದ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ ಪ್ರೋತ್ಸಾಹ ಧನ 4 ರೂಪಾಯಿ ಜೊತೆಗೆ 1 ರೂಪಾಯಿ ಹೆಚ್ಚಳ ಮಾಡಿ ಒಟ್ಟು 5 ರೂಪಾಯಿ ನೀಡಲಾಗುವುದೆಂದು ಘೋಷಿಸಿ, ಹಾಲು ಉತ್ಪಾದಕರ ಮೊಗದಲ್ಲಿ ಮಂದಹಾಸ ಮೂಡಿಸಿದ

## ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ

## ರಾಜ್ಯದ ಸಮಸ್ತ ಹಾಲು ಉತ್ಪಾದಕರ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು




ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ದಿನಾಂಕ 16–11–2016ರಂದು ರಾಮನಗರ ಜಿಲ್ಲಾ ಕ್ರೀಡಾಂಗಣದಲ್ಲಿ 63ನೇ ಅಖಿಲ ಭಾರತ ಸಹಕಾರ ಸಪ್ತಾಹ–2016, ಕಹಾಮ ಹಾಲಿನ ಉತ್ಪನ್ನ ಘಟಕದ ಶಿಲಾನ್ಯಾಸ, ಬಮೂಲ್‌ನ ಕನಕಪುರ ಡೇರಿ ಸಂಕೀರ್ಣದ ಶಿಲಾನ್ಯಾಸ, ಹಾಲು ಉತ್ಪಾದಕರ ಸಮಾವೇಶವನ್ನು ಉದ್ಘಾಟಿಸಿದರು. ಮಾನ್ಯ ಸಹಕಾರ ಸಚಿವರಾದ ಶ್ರೀ ಎಚ್.ಎಸ್, ಮಹದೇವಪ್ರಸಾದ್, ಮಾನ್ಯ ಪಶುಸಂಗೋಪನಾ ಸಚಿವರಾದ ಶ್ರೀ ಎ. ಮಂಜು, ಮಾನ್ಯ ಇಂಧನ ಸಚಿವರು ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್, ರಾಮನಗರ ಜಿಲ್ಲಾ ಲೋಕಸಭಾ ಸದಸ್ಯರಾದ ಮಾನ್ಯ ಶ್ರೀ ಡಿ. ಕೆ. ಸುರೇಶ್, ಕಹಾಮ ಅಧ್ಯಕ್ಷರಾದ ಶ್ರೀ ಪಿ. ನಾಗರಾಜು, ಬೆಂಗಳೂರು ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ. ರಮೇಶ್, ಸನ್ಮಾನ್ಯ ಸಹಕಾರ ಮಹಾಮಂಡಳಿ ಶ್ರೀ ಶೇಖರಗೌಡ ಮಾಲಿ ಪಾಟೀಲರವರು ಮತ್ತು ಕರ್ನಾಟಕ ಹಾಲು ಮಹಾಮಂಡಲ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಕೇಶ್ ಸಿಂಗ್ ಭಾ.ಆ.ಸೇ., ಮತ್ತಿತರ ಗಣ್ಯರು ಹಾಜರಿದ್ದರು.

PDF Compressor Free Version


ಪಿ. ನಾಗರಾಜು, ಅಧ್ಯಕ್ಷರು, ಕಹಾಮ

# ಕರ್ನಾಟಕ ಹಾಲು ಮಹಾಮಂಡಳಿಯ ಅಧ್ಯಕ್ಷರ ನುಡಿ...


ಡಾ. ವರ್ಗೀಸ್ ಕುರಿಯನ್

ಆತ್ಮೀಯ ಹಾಲು ಉತ್ಪಾದಕ ಬಂಧುಗಳೇ,

ನನ್ನೂರು ರಾಮನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ದಿನಾಂಕ 16–11–2016ರಂದು ನಡೆದ 63ನೇ ಅಖಿಲ ಭಾರತ ಸಹಕಾರ ಸಪ್ತಾಹ, ಕಹಾಮ ಹಾಲಿನ ಉತ್ಪನ್ನ ಘಟಕದ ಶಿಲಾನ್ಯಾಸ ಮತ್ತು ಬಮೂಲ್‌ನ ಕನಕಪುರ ಡೇರಿ ಸಂಕೀರ್ಣದ ಶಿಲಾನ್ಯಾಸ ಹಾಗೂ ಹಾಲು ಉತ್ಪಾದಕರ ಸಮಾವೇಶ ಸಮಾರಂಭವು ಅತ್ಯಂತ ಯಶಸ್ವಿಯಾಗಿ ನೆರವೇರಿರುವುದು ನನಗೆ ಅತೀವ ಸಂತಸ ತಂದಿದೆ. ಈ ಸಂದರ್ಭದಲ್ಲಿ ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯೇಕ್ಷವಾಗಿ/ ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಮಸ್ತರಿಗೆ ನನ್ನ ಹೃದಯ ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಮತ್ತು ಸಂಸದರಾದ ಶ್ರೀ ಡಿ.ಕೆ. ಸುರೇಶ್ ಮತ್ತು ನಾನು ಬರದಿಂದ ಕಂಗಾಲಾಗಿರುವ ಹೈನೋದ್ಯಮಕ್ಕೆ ನೆರವಾಗುವ ಸಲುವಾಗಿ ಮತ್ತು ಹಾಲು ಉತ್ಪಾದಕರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಪ್ರಸ್ತುತ ಒಂದು ಲೀಟರ್ ಹಾಲಿಗೆ ನೀಡುತ್ತಿದ್ದ ರೂ. 4 ಪ್ರೋತ್ಸಾಹ ಧನವನ್ನು 6 ರೂ. ಗಳಿಗೆ ಹೆಚ್ಚಿಸಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮನವಿಗೆ ಸ್ಪಂದಿಸಿ ಬರಗಾಲವಿರುವುದರಿಂದ ರೂ. 2 ಬದಲಾಗಿ 1 ರೂ. ಗಳನ್ನು ಹೆಚ್ಚಿಸುತ್ತೇನೆಂದು ಕೂಡಲೇ ಘೋಷಿಸಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದ, ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಶ್ರೀ ಎ. ಮಂಜು ಮತ್ತು ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರಾದ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್‌ರವರು ಹಾಗೂ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್, ಸಂಸದರಾದ ಶ್ರೀ ಡಿ.ಕೆ. ಸುರೇಶ್‌ರವರು ಮತ್ತು ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು, ಕೆಎಂಎಫ್ ಆಡಳಿತ ಮಂಡಳಿ ಸದಸ್ಯರು ಮತ್ತು ನಾನು ಸಮಸ್ತ ಹಾಲು


63ನೇ ಅಖಿಲ ಭಾರತ ಸಹಕಾರ ಸಪ್ತಾಹ–2016

ಉತ್ಪಾದಕರ ಪರವಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದ ಗಳನ್ನು ಅರ್ಪಿಸಿದೆವು. ಇದು ಅತ್ಯಂತ ಮಹತ್ವದ ತೀರ್ಮಾನವಾಗಿದ್ದು, ಇದರಿಂದ ವಾರ್ಷಿಕವಾಗಿ ಸುಮಾರು 230 ಕೋಟಿ ಹಣವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತದೆ. ಇಡೀ ದೇಶದಲ್ಲೇ ಯಾವ ರಾಜ್ಯದಲ್ಲಿಯೂ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡಿದ ಉದಾಹರಣೆಗಳಿಲ್ಲ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿ ಮತ್ತು ಸಿಬ್ಬಂದಿಗಳಿಗೆ ಘೋಷಿಸಿದ್ದ ಒಂದು ಲೀಟರ್ ಹಾಲಿಗೆ ರೂ. 20 ಪೈಸೆಯನ್ನು ನಮ್ಮ ಮನವಿಗೆ ಸ್ಪಂದಿಸಿ 2015–16ನೇ ಸಾಲಿನಲ್ಲಿಯೂ ಮುಂದುವರಿಸುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದರು.

ರಾಜ್ಯ ಸರ್ಕಾರದ ಜನಪ್ರಿಯ ಕ್ಷೀರಭಾಗ್ಯ ಯೋಜನೆಯಡಿ ಶಾಲ ಮಕ್ಕಳಿಗೆ ವಾರದಲ್ಲಿ 3 ದಿನ ನೀಡುತ್ತಿರುವ ಹಾಲನ್ನು ಮುಂದಿನ ದಿನಗಳಲ್ಲಿ ವಾರದಲ್ಲಿ 5ದಿನಕ್ಕೆ ವಿಸ್ತರಿಸ ಲಾಗುವುದೆಂದು ತಿಳಿಸಿ ಫ್ಲೆಕ್ಸಿ ಪ್ಯಾಕ್‌ಗಳಲ್ಲಿ ಸುವಾಸಿತ ಹಾಲನ್ನು ಶಾಲ ಮಕ್ಕಳಿಗೆ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದೆಂದರು. (ಈಗಾಗಲೇ ಮಂಗಳೂರು ಮತ್ತು ತುಮಕೂರು ಹಾಲು ಒಕ್ಕೂಟಗಳಲ್ಲಿ ಫ್ಲೆಕ್ಸಿ ಪ್ಯಾಕ್ ಘಟಕಗಳು ಉತ್ಪಾದನೆಯನ್ನು ಆರಂಭಿಸಿರುತ್ತವೆ)

...3ನೇ ಪುಟದಲ್ಲಿ ಮುಂದುವರೆದಿದೆ

PDF Compressor Free Version

# ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರಿಂದ ಅತಿ ಹೆಚ್ಚು ಹಾಲು ಪೂರೈಸಿದ ಉತ್ಪಾದಕರಿಗೆ ಸನ್ಮಾನ



ದಿನಾಂಕ 16-11-2016ರಂದು ರಾಮನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಹೆಚ್ಚು ಹಾಲು ಉತ್ಪಾದಕರಾದ ನರಸಿಂಹಮೂರ್ತಿ, ಕೋಲಾರದ ರಾಜಗೋಪಾಲ್, ಚಾಮರಾಜನಗರದ ಕೆ. ಪ್ರಕಾಶ ನಾಯ್ಡು, ಮಂಡ್ಯದ ಪಿ.ಕೆ. ಲಕ್ಷ್ಮೀ, ಧಾರವಾಡ ವೇದಾ, ವಿಜಯಪುರ ಅಶೋಕ ಮನಗುಳಿ ಅವರಿಗೆ ರೂ. 25 ಸಾವಿರ ಪ್ರೋತ್ಸಾಹ ಧನ ನೀಡಿ ಸತ್ಕರಿಸಿದರು. ಸಚಿವರಾದ ಎ. ಮಂಜು, ಮಹದೇವಪ್ರಸಾದ್, ಡಿ.ಕೆ. ಶಿವಕುಮಾರ್, ಶಾಸಕ ಎಚ್.ಸಿ. ಬಾಲಕೃಷ್ಣ, ಕೆ.ಎಂ.ಎಫ್. ಅಧ್ಯಕ್ಷ ನಾಗರಾಜು ಇತರರು ಇದ್ದರು.

2ನೇ ಪುಟದಿಂದ ಮುಂದುವರೆದಿದ್ದು...

ರಾಮನಗರ ಜಿಲ್ಲೆಯ ಕನಕಪುರ ಮತ್ತು ಕನ್ನಮಂಗಲ ಗ್ರಾಮದ ವ್ಯಾಪ್ತಿಯಲ್ಲಿ ಒಟ್ಟಾರೇ ಸುಮಾರು ರೂ. 743 ಕೋಟಿಗೂ ಅಧಿಕ ಮೊತ್ತದ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ಶಿಲಾನ್ಯಾಸ ನೆರವೇರಿಸಿದ್ದು, ಚನ್ನಪಟ್ಟಣ ತಾಲ್ಲೂಕಿನ ಕನ್ನಮಂಗಲ ಗ್ರಾಮದ ವ್ಯಾಪ್ತಿಯಲ್ಲಿ ಕೆಎಂಎಫ್‌ವತಿಯಿಂದ ಅಂದಾಜು ರೂ. 300 ಕೋಟಿ ವೆಚ್ಚದಲ್ಲಿ 100 ಮೆ.ಟನ್ ಸಾಮರ್ಥ್ಯದ ಹಾಲಿನ ಪುಡಿ ಘಟಕದ ಸಿವಿಲ್ ಕೆಲಸ ಈಗಾಗಲೇ ಪ್ರಾರಂಭ ಗೊಂಡಿರುತ್ತದೆ ಮತ್ತು ಬೆಂಗಳೂರು ಡೇರಿವತಿಯಿಂದ ವಿವಿಧ ಉತ್ಪನ್ನಗಳನ್ನು ತಯಾರಿಕೆ ಮಾಡುವ ನಿಟ್ಟಿನಲ್ಲಿ ಕನಕಪುರದಲ್ಲಿ ಸುಮಾರು 443 ಕೋಟಿ ವೆಚ್ಚದಲ್ಲಿ ಕನಕಪುರ ಡೇರಿ ಸಂಕೀರ್ಣದ ಕೆಲಸವೂ ಕೂಡ ಪ್ರಾರಂಭವಾಗಿದ್ದು, ಮುಂದಿನ ದಿನಗಳಲ್ಲಿ ಈ ಯೋಜನೆಗಳಿಂದ ಪರಿವರ್ತನೆಗಾಗಿ ಹೊರರಾಜ್ಯಗಳಿಗೆ ಕಳುಹಿಸುತ್ತಿದ್ದ ಹಾಲು ನಮ್ಮ ರಾಜ್ಯದಲ್ಲಿಯೇ ಪರಿವರ್ತನೆಗೊಳ್ಳುವುದರಿಂದ ವಾರ್ಷಿಕವಾಗಿ ಅಂದಾಜು ಸುಮಾರು 100 ಕೋಟಿ ಹಣ ಉಳಿತಾಯವಾಗುತ್ತದೆ.

ಪ್ರಸ್ತುತ ಸುಮಾರು 70 ಲಕ್ಷ ಲೀಟರ್ ಹಾಲು ಪ್ರತಿದಿನ ಉತ್ಪಾದನೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ 1 ಕೋಟಿಗೂ ಅಧಿಕ ಹಾಲು ಉತ್ಪಾದನೆಯಾಗಿ ದೇಶದಲ್ಲೇ ನಂಬರ್ ಒನ್ ಸ್ಥಾನಕ್ಕೆ ಬರುವ ದಿನಗಳು ದೂರವಿರುವುದಿಲ್ಲ ವೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ. ಹೈನೋದ್ಯಮವು ಚಿನ್ನ, ಬೆಳ್ಳಿ ವ್ಯಾಪಾರದಂತೆ ತುಂಬಾ ಬೆಲೆಯುಳ್ಳದಾಗಿರುತ್ತದೆ ಹಗಲಿನಲ್ಲಿ ಉರಿಯುವ ದೀಪ ಗಳನ್ನು ಆಫ್ ಮಾಡಿದರೆ ಹೇಗೆ ಉಳಿತಾಯವಾಗುತ್ತದೋ ಹಾಗೇ ಕೆಎಂಎಫ್ ಮತ್ತು ಒಕ್ಕೂಟಗಳಲ್ಲಿ ಕೆಲವು ಅನಗತ್ಯ ವೆಚ್ಚಗಳಿಗೆ ಕಡಿವಾಣ ಮತ್ತು ಸಣ್ಣ ಸಣ್ಣ ಬದಲಾವಣೆಯನ್ನು ತರುವ ಮೂಲಕ ಹೈನೋದ್ಯಮವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬಹುದಾಗಿದ್ದು, ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರಿಗೆ ಇನ್ನು ಹೆಚ್ಚು ಉಪಯುಕ್ತವಾಗುವ ಕೆಲಸಗಳನ್ನು ಮಾಡುತ್ತೇನೆಂದು ಈ ಮೂಲಕ ತಿಳಿಸುತ್ತಾ ನಿಮ್ಮ ಸಹಕಾರ ಮತ್ತು ಆಶೀರ್ವಾದವನ್ನು ಬಯಸುತ್ತೇನೆ.

ವಂದನೆಗಳೊಂದಿಗೆ,

ಇಂತಿ ರೈತರ ಸೇವೆಯಲ್ಲಿ
ಪಿ. ನಾಗರಾಜು
ಅಧ್ಯಕ್ಷರು, ಕೆಎಂಎಫ್

PDF Compressor Free Version

# ಕರ್ನಾಟಕದಿಂದ ಆಂಧ್ರದ ಅಂಗನವಾಡಿ ಮಕ್ಕಳಿಗೆ ತಿಂಗಳಿಗೆ 18 ಲಕ್ಷ ಲೀಟರ್ ಹಾಲು ಸರಬರಾಜು ಸಂಬಂಧ ಒಪ್ಪಂದ



ಕ.ಹಾ.ಮಹ ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ. ಮತ್ತು ಆಂಧ್ರ ಪ್ರದೇಶದ ಡೇರಿ ನಿಗಮ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮುರಳಿ, ಭಾ.ಆ.ಸೇ. ರವರಿಂದ ಕರ್ನಾಟಕ ರಾಜ್ಯದಿಂದ ಆಂಧ್ರ ಪ್ರದೇಶ ರಾಜ್ಯಕ್ಕೆ ಅಂಗನವಾಡಿ ಮಕ್ಕಳಿಗೆ ಹಾಲು ಸರಬರಾಜು ಪ್ರಯುಕ್ತ ಕರ್ನಾಟಕ ಹಾಲು ಮಹಾಮಂಡಳಿ, ತುಮಕೂರು ಹಾಲು ಒಕ್ಕೂಟ ಮತ್ತು ಆಂಧ್ರ ಪ್ರದೇಶದ ಡೇರಿ ನಿಗಮದೊಂದಿಗೆ ಕರ್ನಾಟಕ ರಾಜ್ಯದಿಂದ ಹಾಲನ್ನು ಪ್ಯಾಕ್ ಮಾಡಿ ಆಂಧ್ರ ಪ್ರದೇಶದ ಅಂಗನವಾಡಿ ಮಕ್ಕಳಿಗೆ ಸರಬರಾಜು ಮಾಡಲು ಒಪ್ಪಂದಕ್ಕೆ ಸಹಿ ಮಾಡಿ ಪರಸ್ಪರ ಒಪ್ಪಂದ ಪತ್ರವನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಸದರಿ ಸಂದರ್ಭದಲ್ಲಿ ಕ.ಹಾ.ಮ ಮಾರುಕಟ್ಟೆ ನಿರ್ದೇಶಕರಾದ ಶ್ರೀ ಎಂ.ಟಿ. ಕುಲಕರ್ಣಿ, ಹಾಲು ಮಹಾ ಮಂಡಳಿ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಮುನೇಗೌಡ, ಹಾಸನ ಹಾಲು ಒಕ್ಕೂಟದ ಕಾರ್ಯ ನಿರ್ವಾಹಕ ನಿರ್ದೇಶಕರಾದ ಗೋಪಾಲಯ್ಯ ಅಪರ ನಿರ್ದೇಶಕರಾದ ಶ್ರೀ ಸತೀಶ್ ಮತ್ತು ಆಂಧ್ರ ಪ್ರದೇಶದ ಪ್ರಧಾನ ವ್ಯವಸ್ಥಾಪಕರಾದ ಪಾಪಾರಾವ್ ಮತ್ತಿತರು ಹಾಜರಿದ್ದರು.

## ಆಂಧ್ರ ಪ್ರದೇಶದ ಡೇರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮುರಳಿ, ಭಾ.ಆ.ಸೇ. ತುಮಕೂರು ಡೇರಿಗೆ ಭೇಟಿ



ಆಂಧ್ರ ಪ್ರದೇಶದ ಡೇರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮುರಳಿ, ಭಾ.ಆ.ಸೇ ರವರು ತುಮಕೂರು ಡೇರಿಗೆ ಭೇಟಿ ನೀಡಿ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಮುನೇಗೌಡ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಹಾಲಿನ ಗುಣಮಟ್ಟ, ಪ್ಯಾಕಿಂಗ್ ಹಾಗೂ ಸರಬರಾಜು ಬಗ್ಗೆ ಪರಸ್ಪರ ಚರ್ಚಿಸಿದರು.

PDF Compressor Free Version

# ಮೇವಿನ ಮರ ಬೆಳೆಸಿ, ಬರಗಾಲದಲ್ಲಿ ಮೇವಿನ ಕೊರತೆಯನ್ನು ನೀಗಿಸಿ

**ಡಾ|| ವಿ.ಪಿ. ಬೋರ್‌ಕರ್,** ವ್ಯವಸ್ಥಾಪಕರು (ಶೇ.ಹಾ.ಎ) ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆ ಹಾಲು ಒಕ್ಕೂಟ, ರಾಷ್ಟ್ರೀಯ ಹೆದ್ದಾರಿ-4, ದೇಗನಹಳ್ಳಿ, ಮುದ್ದೇನಹಳ್ಳಿ ಪೋಸ್ಟ್, ಕೋಲಾರ

ಇತ್ತೀಚೆಗೆ ಮಾನವ ತುಂಬಾ ಸ್ವಾರ್ಥಿಯಾಗುತ್ತಿದ್ದಾನೆ. ನಾಡು ನಗರೀಕರಣಗೊಳ್ಳುತ್ತಿದೆ. ಜೀವನ ಶೈಲಿ ಬಜಾರಾಮಿಯತ್ತ ವಾಲುತ್ತಿದೆ. ಅರಣ್ಯವನ್ನು ನಾಶಗೊಳಿಸುವ ಕಾಯಕದಲ್ಲಿ ಇಂದು ಮಾನವ ಬಹಳಷ್ಟು ಬ್ಯುಸಿಯಾಗಿದ್ದಾನೆ. ಪರಿಣಾಮ, ಏನಾಗಬಹುದು ಒಮ್ಮೆ ಯೋಚಿಸಿ ನೋಡಿ? ಪ್ರಕೃತಿ ಈಗಾಗಲೇ ಮುನಿಸಿಕೊಂಡಿದೆ. ಅಕಾಲಿಕ ಮಳೆ, ಚಂಡಮಾರುತ, ಸುನಾಮಿ, ಜಲಪ್ರಳಯ, ಭೂಕಂಪ ಎಂಬಂತ ವಿಕೋಪಗಳ ಮೂಲಕ ಮನುಷ್ಯನ ವಿರುದ್ಧ ಅದು ಸೇಡು ತೀರಿಸಿಕೊಳ್ಳಲು ಪ್ರಾರಂಭಿಸಿದೆ. ಮಾತ್ರವಲ್ಲ ಪ್ರಕೃತಿ ಇತ್ತೀಚೆಗೆ ಸಾಕಷ್ಟು ಮಲಿನಗೊಳ್ಳುತ್ತಿದೆ.

ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳು ಅನೇಕ ವರ್ಷಗಳಿಂದ ಬರಪೀಡಿತ ಜಿಲ್ಲೆಗಳೆಂದೇ ಪ್ರಸಿದ್ಧಿ ಪಡೆದಿವೆ. ಹರಿವ ನದಿಗಳು ಇಲ್ಲಿಲ್ಲ. ಕೃಷಿಗೆ ಎಲ್ಲ ಕೃಷಿಕರು ಅವಲಂಬಿಸಿರುವುದು ಮಳೆಯನ್ನು, ಕೊಳವೆ ಬಾವಿಗಳೇ ಇವರ ಜೀವಾಳ. ಸತತ ಬರಗಾಲದಿಂದ ಕೊಳವೆ ಬಾವಿಗಳೂ ಸಹ ಬತ್ತಿ ಹೋಗಲು ಆರಂಭಿಸಿವೆ. ಹಸಿರು ಮೇವಿಗೆ ಕೊರತೆ ಶುರುವಾಗಿದೆ. ಮೇವಿಲ್ಲದೆ ಹೈನುಗಾರಿಕೆಯನ್ನು ಮಾಡುವುದಾದರೂ ಹೇಗೆ ಅಲ್ಲವೇ?

ಇತ್ತೀಚೆಗೆ ದೇಶದ ರಾಜಧಾನಿ ದೆಹಲಿ ಪತ್ರಿಕೆಗಳಲ್ಲಿ ಸುದ್ದಿ ಮಾಡಿತ್ತು. ಮಾಲಿನ್ಯ ಮಟ್ಟ ನಿರೀಕ್ಷೆಗೂ ಮೀರಿ ಉಸಿರಾಟ ಮಾಡಲಾಗದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿತ್ತು. ಶಾಲಾ ಕಾಲೇಜುಗಳಿಗೆ ವಾರಾನುಗಟ್ಟಲೆ ರಜೆ ಘೋಷಣೆ ಮಾಡುವಷ್ಟು ಮಟ್ಟಿಗೆ ಪರಿಸರ ಅಲ್ಲಿ ಮಲಿನವಾಗಿತ್ತು ಎಂದರೆ ಒಮ್ಮೆ ಯೋಚಿಸಿ ನೋಡಿ. ಇದು ನಿಜಕ್ಕೂ ಅಂತ್ಯ ಕಾಲ ಸಮೀಪಿಸುತ್ತಿರುವುದರ ಸೂಚಕ ಅಲ್ಲದೆ ಮತ್ತೇನಲ್ಲ. ಹೌದು! ಮನುಷ್ಯ ಎಚ್ಚೆತ್ತುಕೊಳ್ಳಲು ಇದು ಸುಸಮಯ.

ಇಂದು ಮಳೆ ಕಡಿಮೆಯಾಗಲು, ಕೆರೆ-ಕುಂಟೆಗಳು ಹಾಗೂ ಕೊಳವೆ ಬಾವಿಗಳು ಬತ್ತಿ ಹೋಗಲು, ಅರಣ್ಯ ನಾಶವೇ ಪ್ರಮುಖ ಕಾರಣ. ಹಾಗಾಗಿ ಮರಗಳು ಬೇಕು. ನಮಗೆ ಮಾತ್ರವಲ್ಲ, ಪ್ರಾಣಿಗಳಿಗೂ ಅದರ ಅಗತ್ಯವಿದೆ. ಮರಗಳ ಕೊರತೆಯಿಂದ ಮಳೆಯೇ ಇಲ್ಲ ಎಂದ ಮೇಲೆ ಹಸಿರು ಮೇವು ಸಿಗಲು ಸಾಧ್ಯವಾಗುವುದಾದರೂ ಹೇಗೆ? ಮೇವೇ ಇಲ್ಲ ಎಂದ ಮೇಲೆ ಹೈನುಗಾರಿಕೆ ಕಷ್ಟಕರ ಎನಿಸುವುದರಲ್ಲಿ ಅನುಮಾನವೇ ಇಲ್ಲ.

ಹಸಿರು ಮೇವಿಗೆ ಕೊರತೆ ಉಂಟಾಗುವುದನ್ನು ತಪ್ಪಿಸುವ ದೃಷ್ಟಿಯಿಂದ ಕೋಮುಲ್ ಈಗಾಗಲೇ "ಗ್ರೀನ್ ಇಂಡಿಯಾ ಮೂವ್‌ಮೆಂಟ್" ಎಂಬ ಕಾರ್ಯಕ್ರಮ ಒಂದನ್ನು ಜಾರಿಗೆ









ತಂದಿದೆ. ಅಗಸೆ, ನುಗ್ಗೆ, ಹೆಬ್ಬೇವು ಹಾಗೂ ಇನ್ನಿತರೆ ಮೇವಿನ ಮರಗಳನ್ನು ಬೆಳೆಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಒಕ್ಕೂಟ ಈಗಾಗಲೇ ನಾಚಲಿ ಶೀತಲ ಕೇಂದ್ರ ಹಾಗೂ ಕೋಲಾರದ ಡೇರಿ ಆವರಣದಲ್ಲಿ ಮರಜಾತಿಯ ಮೇವಿನ ಸಸಿಗಳನ್ನು ಬೆಳೆಸಿ, ಸಂಘಗಳಿಗೆ ವಿತರಿಸುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಬರಗಾಲದಲ್ಲಿ ಹಸಿರು ಮೇವಿಗೆ ಕೊರತೆ ಉಂಟಾದಾಗ ಹೈನು ರಾಸುಗಳ ಪೋಷಣೆಗೆ ಮೇವಿನ ಮರಗಳು ತೀರಾ ಅತ್ಯವಶ್ಯಕ. ಈ ಯೋಜನೆಯಡಿ ಒಕ್ಕೂಟ ಈಗಾಗಲೇ 17000 ಮೇವಿನ ಮರಜಾತಿಯ ಸಸಿಗಳನ್ನು ಹೈನುಗಾರರಿಗೆ ವಿತರಿಸಿದೆ. ವಿತರಣೆಗೆ ಇನ್ನೂ ಸುಮಾರು 30000 ಸಸಿಗಳು ಇದೀಗ ಸಿದ್ಧವಾಗಿದೆ. "ಮರ ಬೆಳೆಸಿ ನಾಡು ಉಳಿಸಿ" ಎಂಬ ಘೋಷವಾಕ್ಯ ಹೇಳುವಂತೆ ಪರಿಸರದ ಉಳಿವಿನ ಬಗ್ಗೆ ಹಾಲು ಉತ್ಪಾದಕರಿಗೆ ಮನವರಿಕೆ ಮಾಡುವುದೇ ಈ ಯೋಜನೆಯ ಮತ್ತೊಂದು ಉದ್ದೇಶವಾಗಿದೆ.

ಪ್ರತಿ ಸಂಘಕ್ಕೆ ಮೇವಿನ ಮರದ 200 ಸಸಿಗಳಂತೆ ಒಟ್ಟಾರೆ 3,50,000 ಸಸಿಗಳನ್ನು ವಿತರಿಸಿ ಬೆಳೆಸುವ ಕಾರ್ಯಕ್ರಮಕ್ಕೆ ಪ್ರಸಕ್ತ ಸಾಲಿನ ಸಮಗ್ರ ವ್ಯಾಪಾರ ಕ್ರಿಯಾಯೋಜನೆಯಲ್ಲಿ ಈಗಾಗಲೇ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಪ್ರತಿ ಸಸಿಗೆ ರೂ. 1/- ರಂತೆ ಅವುಗಳನ್ನು ರಿಯಾಯ್ತಿ ದರದಲ್ಲಿ ಹಾಲು ಉತ್ಪಾದಕರಿಗೆ ವಿತರಿಸಲು ಕೂಡಾ ತೀರ್ಮಾನ ಕೈಗೊಳ್ಳಲಾಗಿದೆ. ಹೊಲದ ಬದುಗಳಲ್ಲಿ, ಕೃಷಿಹೊಂಡದ ಅಂಚಿನಲ್ಲಿ, ಮನೆಯ ಅಕ್ಕ-ಪಕ್ಕ, ಸಾರ್ವಜನಿಕ ಸ್ಥಳ ಹಾಗೂ ಸಹಕಾರ ಸಂಘಗಳ ಆವರಣದಲ್ಲಿ ಈ ಸಸಿಗಳನ್ನು ಬೆಳೆಸಬಹುದಾಗಿದೆ.

ಬೇಸಿಗೆ ಕಾಲದಲ್ಲಿ ಹಸಿರು ಮೇವಿಗೆ ಕೊರತೆ ಉಂಟಾಗುವ ಕಾರಣ ಸಾಮಾನ್ಯವಾಗಿ ಪಶು ಆಹಾರಕ್ಕೆ ಬೇಡಿಕೆ ಹೆಚ್ಚಾಗುವುದು ಸಹಜ. ಕಚ್ಚಾ ಪದಾರ್ಥಗಳ ಕೊರತೆಯಿಂದ ಬೇಸಿಗೆಯಲ್ಲಿ ಬೇಡಿಕೆ ಪೂರೈಸುವಷ್ಟು ಪ್ರಮಾಣದಲ್ಲಿ ಪಶು ಆಹಾರದ ಉತ್ಪಾದನೆ ಕೂಡ ಸಾಧ್ಯವಾಗದ ಮಾತು. ಇಂತಹ ಪರಿಸ್ಥಿತಿಯಲ್ಲಿ ಹಸಿರು ಮೇವಿನ ಲಭ್ಯತೆಗೆ ನಮಗೆ ಉಳಿದಿರುವ ಒಂದೇ ದಾರಿಯೆಂದರೆ ಮೇವಿನ ಮರಗಳನ್ನು ಬೆಳೆಸುವುದು. ಈ ಮೂಲಕ ಹಾಲುತ್ಪಾದನಾ ವೆಚ್ಚವನ್ನು ಸಹಾ ಕಡಿಮೆಗೊಳಿಸಬಹುದಾಗಿದೆ. "ಮನೆಗೊಂದು ಮರ ಊರಿಗೊಂದು ವನ" ಎಂಬ ಘೋಷ ವಾಕ್ಯದಂತೆ ಈ ಕಾರ್ಯಕ್ರಮದ ಮೂಲಕ ನಾಡು ಉಳಿಸುವ ಕೆಲಸಕ್ಕೆ ದಾರಿಮಾಡಿ ಕೊಟ್ಟಂತೆಯೂ ಆಗುತ್ತದೆ ಅಲ್ಲವೇ?

PDF Compressor Free Version

# ಮಹಿಳಾ ಶಕ್ತಿ

## ಬಳ್ಳಾರಿ ಜಿಲ್ಲಾಡಳಿತದ ಅನುದಾನದಲ್ಲಿ 101 ಸಂಘಗಳ ಸ್ಥಾಪನೆ



ದಿನಾಂಕ 2–10–2016ರಂದು ಬಳ್ಳಾರಿ ಜಿಲ್ಲೆಯಲ್ಲಿ 101 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸನ್ಮಾನ್ಯ ಕಾರ್ಮಿಕ ಸಚಿವರಾಗಿರುವ ಶ್ರೀ ಸಂತೋಷ್ ಎಸ್. ಲಾಡ್‌ರವರು ಉದ್ಘಾಟನೆ ಮಾಡಿದರು. ಸಭೆಯ ಅಧ್ಯಕ್ಷತೆ ಸ್ಥಾನವನ್ನು ಶಾಸಕರಾದ ಶ್ರೀ ಈ. ತುಕಾರಾಮ್, ಸಂಡೂರು ವಿಧಾನ ಸಭಾ ಕ್ಷೇತ್ರ ಹಾಗೂ ಸಂಸದೀಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ವಹಿಸಿದ್ದು ಕಾರ್ಯಕ್ರಮದಲ್ಲಿ ರಾಯಚೂರು ಬಳ್ಳಾರಿ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಿ. ಸತ್ಯನಾರಾಯಣ ಹಾಗೂ ಉಪಾಧ್ಯಕ್ಷರಾದ ಶ್ರೀ ಜಯತೀರ್ಥ ರಾವ್ ದೇಸಾಯಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಜಿ.ಎನ್. ಕೃಷ್ಣೇಗೌಡ ಮತ್ತಿತರ ನಿರ್ದೇಶಕರುಗಳು, ಗಣ್ಯರು ಹಾಜರಿದ್ದರು.

ಜಿಲ್ಲಾಡಳಿತದ ಅನುದಾನಗಳಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಬಳ್ಳಾರಿ ಜಿಲ್ಲೆಯಲ್ಲಿ 101 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲು ದಿನಾಂಕ 2–10–2016ರಂದು ಶ್ರೀ ಸಂತೋಷ್ ಎಸ್.ಲಾಡ್, ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟನೆ ಮಾಡಿರುತ್ತಾರೆ. ಈ ಕಾರ್ಯಕ್ರಮದಲ್ಲಿ "ನಂದಿನಿ ಸ್ಪೇಷಲ್ ಹಾಲು" ಬಿಡುಗಡೆ ಸಮಾರಂಭ ಜರುಗಿಸಲಾಯಿತು.

ಈ ಯೋಜನೆಯಡಿಯಲ್ಲಿ ಸ್ಥಾಪನೆ ಮಾಡಿದ ಪ್ರತಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ರೂ. 2.10 ಲಕ್ಷ ಅನುದಾನ ಜಿಲ್ಲಾಡಳಿತದಿಂದ ಬಿಡುಗಡೆಯಾಗಲಿದೆ. ಈ ಅನುದಾನದಲ್ಲಿ ಗಣಕಯಂತ್ರ, ಮಿಲ್ಕ್ ಅನಲೈಸರ್, ಹಾಲು ಶೇಖರಣಾ ಸಾಮಾಗ್ರಿಗಳು ಮತ್ತು ಪೀಠೋಪಕರಣಗಳನ್ನು ಕೊಡಲಾಗುವುದು. ಬಳ್ಳಾರಿ ಜಿಲ್ಲೆಯಲ್ಲಿ 101 ಸಂಘಗಳನ್ನು ತಾಲ್ಲೂಕುವಾರು ನೊಂದಣಿ ಮಾಡಿಸಲಾಗುವುದು. ಈ ಯೋಜನೆಯ ಅನುಷ್ಠಾನದ ನಂತರ 101 ಸಂಘಗಳಿಂದ ಅಂದಾಜು 20,000 ಲೀ. ಹಾಲು ಶೇಖರಣೆ ಹೆಚ್ಚುವರಿಯಾಗುವ ನಿರೀಕ್ಷೆ ಹೊಂದಿದೆ.

ಈ ಯೋಜನೆಯನ್ನು ಒಂದು ವರ್ಷದ ಒಳಗೆ ಅನುಷ್ಠಾನಗೊಳಿಸಲಾಗುವುದು. ಈ ಸಂಘಗಳ ಸದಸ್ಯರುಗಳಿಗೆ ಆರ್ಥಿಕವಾಗಿ ಸದೃಢರಾಗಲು ವಿವಿಧ ಯೋಜನೆಗಳ ಅಡಿಯಲ್ಲಿ ರಾಸು ಖರೀದಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು.

ಈ ಸಂದರ್ಭದಲ್ಲಿ "ನಂದಿನಿ ಸ್ಪೇಷಲ್ ಹಾಲು"ನ್ನು ಶ್ರೀ ಸಂತೋಷ್ ಎಸ್.ಲಾಡ್, ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಈ. ತುಕರಾಮ್, ಮಾನ್ಯ ಶಾಸಕರು, ಸಂಡೂರು ವಿಧಾನಸಭಾ ಕ್ಷೇತ್ರ, ಹಾಗೂ ಸಂಸದೀಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಡಾ. ರಾಮ್ ಪ್ರಸಾತ್ ಮನೋಹರ್, ಐ.ಎ.ಎಸ್ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು (ಪ್ರ), ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಭಾಗವಹಿಸಿ ಮಹಿಳೆಯರು ಈ ಯೋಜನೆಯ ಲಾಭವನ್ನು ಪಡೆದುಕೊಂಡು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ತಿಳಿಸಿದರು.

PDF Compressor Free Version

# ಯಂತ್ರ ಬಳಸಿ ಹಾಲಿಂಡುವ ಸಲುವಾಗಿ ಸಂಘ ಮಟ್ಟದಲ್ಲಿ ಸಾಮೂಹಿಕ ಕೂಡುಗೋಣೆ



**ಡಾ. ಎಚ್. ರಾಘವೇಂದ್ರ,** ಉಪ ವ್ಯವಸ್ಥಾಪಕರು (ಪಶುವೈದ್ಯಕೀಯ ಸೇವೆ), ಚಿಂತಾಮಣಿ-563125.

ಮಾರುಕಟ್ಟೆ ವಿಚಾರಕ್ಕೆ ಬಂದರೆ ಇಂದಿನದ್ದು ಮುಕ್ತ ಹಾಗು ಸ್ಪರ್ಧಾತ್ಮಕ ಮಾರುಕಟ್ಟೆ. ವ್ಯಾಪಾರ ನಡೆಸುವ ಸಲುವಾಗಿ ವಿಶ್ವಮಟ್ಟದಲ್ಲಿ ಒಪ್ಪಂದವೊಂದು ಅದ್ಯಾವ ಗಳಿಗೆಯಲ್ಲಿ ಜಾರಿಗೆ ಬಂತೋ ಏನೋ, ಅಂದಿನಿಂದ ಮಾರುಕಟ್ಟೆ ಕ್ಷೇತ್ರದ ಇಡೀ ಚಿತ್ರಣ ನಿರೀಕ್ಷೆಗೂ ಮೀರಿ ಬದಲಾಗಿಬಿಟ್ಟಿದೆ. ಈ ಬದಲಾವಣೆ ಕೇವಲ ವಿದೇಶಿ ಮಟ್ಟದ ಮಾರುಕಟ್ಟೆಗೆ ಮಾತ್ರ ಸೀಮಿತಗೊಂಡಿಲ್ಲ. ದೇಶೀಯ ಮಟ್ಟದ ಮಾರುಕಟ್ಟೆ ವ್ಯವಸ್ಥೆಯಲ್ಲಿ ಕೂಡ ನಾವು ಈ ಗುರುತರ ಬದಲಾವಣೆಯನ್ನು ಗಮನಿಸಬಹುದಾಗಿದೆ. ಮಾರುಕಟ್ಟೆ ಕ್ಷೇತ್ರದಲ್ಲಿ ಈ ಹಿಂದೆ ಇದ್ದ ನಿರ್ಬಂಧ ಇಂದು ಇಲ್ಲವಾಗಿದೆ ಎನ್ನಲು ಈ ಒಪ್ಪಂದವೇ ಪ್ರಮುಖ ಕಾರಣ ಎನ್ನಬಹುದು. ಹಾಗಾಗಿ ವ್ಯಾಪಾರ ಕ್ಷೇತ್ರದಲ್ಲಿ ಇಂದು ಸ್ಪರ್ಧೆ ಅನ್ನೋದು ತಾರಕಕ್ಕೇರಿದೆ. ಮಾರುಕಟ್ಟೆಯಲ್ಲಿ ಇಂದು ಅವೇನಿದ್ದರೂ ಸರಕಿನ ಗುಣಮಟ್ಟಕ್ಕಷ್ಟೇ ಮೊದಲಾದ್ಯತೆ. ಸರಕು ಉತ್ತಮ ಗುಣಮಟ್ಟದ್ದಾಗಿದ್ದರೆ ಮಾತ್ರ ಗ್ರಾಹಕರಿಂದ ನಾವು ಬೇಡಿಕೆಯನ್ನು ನಿರೀಕ್ಷೆ ಮಾಡಬಹುದು. ಗುಣಾತ್ಮಕ ಸರಕಿದ್ದರೆ ಜನಪ್ರಿಯತೆ. ಜನಪ್ರಿಯತೆ ಇದ್ದರೆ ಲಾಭದಾಯಕ ವಹಿವಾಟು. ನಮ್ಮ ವಹಿವಾಟಿನಲ್ಲಿ ಸರಕೆಂದರೆ ಹಾಲು ಮತ್ತು ಹಾಲಿನ ಉತ್ಪನ್ನಗಳೆಂದು ಅರ್ಥೈಸಿಕೊಳ್ಳಬೇಕು.

ಹಾಲು ಗುಣಮಟ್ಟದ್ದಾಗಿದೆ ಎನ್ನಲು ನಾವು ಪರಿಗಣಿಸುವ ಮಾನದಂಡಗಳಾದರೂ ಏನು ಎಂಬುದರ ಬಗ್ಗೆ ಇಂದು ಹೈನುಗಾರರು ಅರಿತುಕೊಂಡಿರಬೇಕು. ಗುಣಮಟ್ಟಕ್ಕೆಂದು ಹಾಲನ್ನು ಅಳತೆ ಮಾಡುವಾಗ ನಾವಿಂದು ನಾಲ್ಕು ಪ್ರಮುಖ ಮಾನದಂಡಗಳಿಗೆ ಆದ್ಯತೆ ನೀಡುತ್ತೇವೆ. ಅವುಗಳೆಂದರೆ

1. ಹಾಲು ಹೊಂದಿರಬಹುದಾದ ಬ್ಯಾಕ್ಟೀರಿಯಗಳ ಸಂಖ್ಯೆ.
2. ಹಾಲು ಹೊಂದಿರಬಹುದಾದ ಪೋಷಕಾಂಶಗಳ ಮಟ್ಟ.
3. ಹಾಲನ್ನು ರಾಸಾಯನಿಕ ಬಳಸಿ ಕಲಬೆರಕೆ ಮಾಡಲಾಗಿದೆಯೇ ಅಥವಾ ಇಲ್ಲವೇ? ಹಾಗು
4. ಹಾಲು ಹೊಂದಿರಬಹುದಾದ ಪ್ರತಿಜೈವಿಕ ವಿಷಧಾಂಶದ ಮಟ್ಟ.

ಸದ್ಯದ ಮಟ್ಟಿಗೆ ಈ ಲೇಖನವನ್ನು ಬ್ಯಾಕ್ಟೀರಿಯಾ ಆಧಾರಿತಾ ಗುಣಮಟ್ಟಕ್ಕೆ ಮಾತ್ರ ಸೀಮಿತಗೊಳಿಸುತ್ತಿದ್ದೇನೆ. ಬ್ಯಾಕ್ಟೀರಿಯಾ ಎನ್ನುತ್ತಿದ್ದಂತೆ – ಹಾಗೆಂದರೇನು ಎಂಬ ಒಂದು ಪ್ರಶ್ನೆ ನಿಮ್ಮ ತಲೆಯಲ್ಲಿ ಸುಳಿಯಬಹುದು. ಈ ಭೂಮಿ ಮೇಲೆ ಬದುಕಿರುವ ಜೀವಿಗಳ ಪೈಕಿ ಇವೂ ಕೂಡ ಒಂದು. ಬರಿಗಣ್ಣಿಂದ ಇವನ್ನು ನೋಡಲಂತೂ ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಅವನ್ನು "ಸೂಕ್ಷ್ಮಜೀವಿಗಳೆಂದೇ" ಕರೆಯಲಾಗುತ್ತದೆ. ಇವೊಂದು ರೀತಿಯಲ್ಲಿ ಸರ್ವಾಂತರ್ಯಾಮಿ. ಅಂದರೆ ಈ ಭೂಮಿ ಮೇಲೆ ಇವು ನೆಲಸದೆ ಇರುವ ಜಾಗವೇ ಇಲ್ಲವೇ ಇಲ್ಲ. ಆರೋಗ್ಯದ ವಿಚಾರದಲ್ಲಿ ಪಶುವೊಂದು ನೂರಕ್ಕೆ ನೂರರಷ್ಟು ಫಿಟ್ ಎಂದಿಟ್ಟುಕೊಳ್ಳೋಣ. ಇಂಥ ಪಶುವಿನ ಕೆಚ್ಚಲಿನಿಂದ ಹಿಂಡಿದಂಥ ಹಾಲಿನಲ್ಲಿ ಕೂಡ ಬ್ಯಾಕ್ಟೀರಿಯಗಳು ಇದ್ದೇ ಇರುತ್ತವೆ. ಪ್ರತಿ ಮಿಲಿ ಲೀಟರ್ (ಒಂದು ಲೀಟರ್ ಅನ್ನು ಸಾವಿರ ಭಾಗಗಳನ್ನಾಗಿ ವಿಭಜನೆ ಮಾಡಿದಾಗ ಅದರಲ್ಲಿನ ಒಂದು



ಕ್ರಮ ಇಲ್ಲವೇ ಇಲ್ಲ. ಹಾಲು ಹೊಂದಿರುವಂಥ ಪೋಷಕಾಂಶಗಳನ್ನು ಅವು ತಮ್ಮ ಬದುಕಿನ ನಿರ್ವಹಣೆಗೆ ಹಾಗು ಸಂತಾನೋತ್ಪತ್ತಿ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತವೆ. ಪ್ರತಿ 20 ನಿಮಿಷಗಳಿಗೆ ಒಂದು ಬಾರಿಯಂತೆ ಅವು ಸಂಖ್ಯೆಯಲ್ಲಿ ಎರಡುಪಟ್ಟು ಹೆಚ್ಚುತ್ತಾ ಸಾಗುತ್ತವೆ. ಸೀಸನ್ ಒಂದು ವೇಳೆ ಬೇಸಿಗೆ ಎಂದಾಗಿದ್ದರೆ ಅವುಗಳ ಸಂಖ್ಯಾಭಿವೃದ್ಧಿ/ ಸಂತಾನೋತ್ಪತ್ತಿ ಚಟುವಟಿಕೆ ಇನ್ನಷ್ಟು ತ್ವರಿತಗತಿಯಲ್ಲಿ ಸಾಗುತ್ತದೆ. ವರ್ಧನೆ ವಿಚಾರದಲ್ಲಿ ಬೇಸಿಗೆಯ ತಾಪಮಾನ ಅವುಗಳ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲಿದೆ ಎಂಬ ಅಂಶ ನಿಮಗೆ ನೆನಪಿರಲಿ. ವಿವಿಧ ಮೂಲಗಳಿಂದ ಹಾಲಿಗೆ ಬಂದು ಸೇರಿಕೊಳ್ಳುವ ಬ್ಯಾಕ್ಟೀರಿಯಗಳು ವರ್ಧಿಸುವಾಗ ಲ್ಯಾಕ್ಟೋಸ್ ಎಂಬ ಪೋಷಕಾಂಶವನ್ನು ಬಳಸಿಕೊಳ್ಳುತ್ತವೆ. ವಾಸ್ತವದಲ್ಲಿ ಇದು ಹಾಲಿನಲ್ಲಿರುವ ಸಕ್ಕರೆಯ ಅಂಶವಲ್ಲದೆ ಮತ್ತೇನಲ್ಲ. ಬ್ಯಾಕ್ಟೀರಿಯಾಗಳು ಹಾಲಿನಲ್ಲಿ ಲಭ್ಯವಿರುವ ಸಕ್ಕರೆ ಅಂಶ ಲ್ಯಾಕ್ಟೋಸ್ ಅನ್ನು ಬಳಸಿಕೊಂಡು ಲ್ಯಾಕ್ಟಿಕ್ ಆಸಿಡ್ ಎಂಬ ಆಮ್ಲವನ್ನು ಉತ್ಪತ್ತಿ ಮಾಡುತ್ತವೆ. ಬ್ಯಾಕ್ಟೀರಿಯಗಳ ಸಂಖ್ಯೆ ಹಾಲಿನಲ್ಲಿ ಹೆಚ್ಚಾದಂತೆ ಲ್ಯಾಕ್ಟಿಕ್ ಆಮ್ಲದ ಉತ್ಪಾದನೆಯೂ ಹೆಚ್ಚಾಗ ತೊಡಗುತ್ತದೆ. ಆಮ್ಲ/ಆಸಿಡ್ ಎಂದರೆ ರುಚಿಯಲ್ಲಿ ಅದು ಹುಳಿಯಾಗಿರಲೇ ಬೇಕು. ಇನ್ನು ಹುಳಿ ಎಂಬ ರುಚಿ ಹಾಲಿಗೆ ಬೆರೆತರೆ ಹಾಲು ಕೆಡದಿರಲು ಸಾಧ್ಯವೇ?

ಕೆಚ್ಚಲಿನಿಂದ ಒಮ್ಮೆ ಹಿಂಡಿದಂಥ ಹಾಲನ್ನು ನಾವು ಹೆಚ್ಚೆಂದರೆ 6 ಗಂಟೆಗಳ ಕಾಲ ಕೆಡದಂತೆ ಇಡಬಹುದಷ್ಟೆ. ಆ ಬಳಿಕ ಅದು ಕೆಡಲೇಬೇಕು. **ಹಾಲನ್ನು ಕೆಡುವಂತೆ ಮಾಡುವಲ್ಲಿ ಇಲ್ಲಿ ಪ್ರಮುಖ ಪಾತ್ರ ವಹಿಸಲಿರುವುದೇ ಅದಕ್ಕೆ ಸೇರ್ಪಡೆಗೊಂಡ ಬ್ಯಾಕ್ಟೀರಿಯಗಳು ಎಂಬ ವಿಚಾರ ಪ್ರಾಯಶಃ ನಿಮಗೀಗ ಸ್ಪಷ್ಟವಾಗಿರಬೇಕು.** ಹಾಲಿನಲ್ಲಿ ಬ್ಯಾಕ್ಟೀರಿಯಗಳ ಸಂಖ್ಯೆ ಹೆಚ್ಚಾದಂತೆ ಅದು ಬೇಗನೆ ಕೆಡುತ್ತದೆ. ಅದನ್ನು ನಾವು ಕಳಪೆ ದರ್ಜೆಯ ಹಾಲೆಂದು ಕರೆಯಬೇಕಾಗುತ್ತದೆ. ಹಾಲಿನಲ್ಲಿ ಬ್ಯಾಕ್ಟೀರಿಯಗಳ ಸಂಖ್ಯೆ ಕಡಿಮೆ ಇದ್ದಾಗ ಕೆಡದಂತೆ ಅದನ್ನು ಹೆಚ್ಚು ಹೊತ್ತು ಕಾಪಿಡಬಹುದು. ಅಂತಹ ಹಾಲನ್ನು ನಾವು ಉತ್ತಮ ದರ್ಜೆಯ ಹಾಲೆಂದು ಪರಿಗಣಿಸಬಹುದಾಗಿದೆ.

ಹೈನುಗಾರಿಕೆಯಲ್ಲಿ ನಿತ್ಯ ನಾವಿಂದು ಅನುಸರಿಸುತ್ತಿರುವ ಚಟುವಟಿಕೆಗಳ ಪೈಕಿ ಬಹುತೇಕ ಚಟುವಟಿಕೆಗಳು ಶುದ್ಧ ಹಾಲು



"ಹಸಿರು ಮೇವು ಬೆಳೆಸಿ – ಅಧಿಕ ಹಾಲು ಉತ್ಪಾದಿಸಿ"

PDF Compressor Free Version

ಉತ್ಪಾದನೆಗೆ ಕಂಟಕಪ್ರಾಯವಾಗಿ ಪರಿಣಮಿಸಿವೆ. **ನೈರ್ಮಲ್ಯತೆ ವಿಚಾರದಲ್ಲಿ ನಮ್ಮಲ್ಲಿನ ಉತ್ಪಾದಕರಿಗೆ ಅರಿವಿನ ಕೊರತೆ ಇದೆ ಎಂಬುದೇ ಇದಕ್ಕೆ ಪ್ರಮುಖ ಕಾರಣ.** ನಿಜಕ್ಕೂ ಇದು ಶೋಚನೀಯ ಸಂಗತಿ. ತಮಗೇ ಗೊತ್ತಿಲ್ಲದಂತೆ ಹಾಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬ್ಯಾಕ್ಟೀರಿಯಾಗಳನ್ನು ಸೇರಿಸುವ ಕಾರ್ಯದಲ್ಲಿ ಹಾಲುತ್ಪಾದಕರು ಇಂದು ತಮ್ಮನ್ನು ಅತಿಯಾಗಿ ತೊಡಗಿಸಿಕೊಂಡಿದ್ದಾರೆ. ಅದ್ಹೇಗೆ ಎನ್ನುತ್ತೀರಾ? ಹಾಲಿಂಡುವ ಮೊದಲು ಕೈ ತೊಳೆದುಕೊಳ್ಳುವ ಅಭ್ಯಾಸ ನಮ್ಮಲ್ಲಿ ಎಷ್ಟು ಮಂದಿ ಉತ್ಪಾದಕರುಗಳಿಗಿದೆ? ಕೈ ತೊಳೆಯದೆ ಹಾಲಿಂಡುವವರು ತಮ್ಮ ಬೆರಳುಗಳನ್ನು ಹಾಲಿಗೆ ಅದ್ದಿ ಸಾವಿರಾರು ಸಂಖ್ಯೆಯಲ್ಲಿ ಬ್ಯಾಕ್ಟೀರಿಯಾಗಳನ್ನು ಹಾಲಿಗೆ ಸೇರ್ಪಡೆಗೊಳ್ಳುವಂತೆ ಮಾಡುತ್ತಿದ್ದಾರೆ. ಹಾಲಿಂಡುವ ಮೊದಲು ಕೆಚ್ಚಲನ್ನು ಪೂರ್ಣ ಪ್ರಮಾಣದಲ್ಲಿ ತೊಳೆಯಲು ಹಿಂದೇಟು ಹಾಕುವ ಮಂದಿಯೂ ನಮ್ಮಲ್ಲಿದ್ದಾರೆ. ಸಗಣಿ ಬೆರೆತ ನೀರು ಕೆಚ್ಚಲ ತೊಟ್ಟಿನಿಂದ ತೊಟ್ಟಿಕ್ಕಿ ಹಾಲಿನ ಪಾತ್ರೆಯನ್ನು ಸೇರಿಕೊಂಡಿತು ಎಂದರೆ ಏನಾಗಬಹುದು? ಸಗಣಿ ಬೆರೆತ ನೀರಿನಲ್ಲಿ ಬ್ಯಾಕ್ಟೀರಿಯಗಳು ಲಕ್ಷ-ಲಕ್ಷ ಸಂಖ್ಯೆಯಲ್ಲಿರುತ್ತವೆ ಎಂಬುದು ನೆನಪಿರಲಿ. ಹಾಲು ಕರೆಯುವ ಸಮಯದಲ್ಲಿ ಹಸುವಿಗೆ ಮೇಯಲು ಮೇವನ್ನೊದಗಿಸಿದೆ ಎಂದಿಟ್ಟುಕೊಳ್ಳೋಣ. ಮೇವು ಸೇವಿಸುವಾಗ ಧೂಳು ಮೇಲೆದ್ದು ಹಾಲಿನ ಪಾತ್ರೆಯನ್ನು ಸೇರಿಕೊಂಡರೆ ಹಾಲಿನ ಪಾತ್ರೆಗೆ ಮತ್ತಷ್ಟು ಬ್ಯಾಕ್ಟೀರಿಯಗಳು ಸೇರ್ಪಡೆಗೊಂಡಂತೆ. ಹಾಲಿಂಡುವಾಗ ಪಶು ಸಗಣಿ ಅಥವ ಗಂಜಲವನ್ನು ವಿಸರ್ಜನೆ ಮಾಡಿತು ಎಂದಿಟ್ಟುಕೊಳ್ಳೋಣ. ನೆಲಕ್ಕೆ ಬಿದ್ದ ಸಗಣಿ ಅಥವ ಗಂಜಲ ಅಲ್ಲಿಂದ ಸಿಡಿದು ಹಾಲಿನ ಪಾತ್ರೆಯನ್ನು ಸೇರಿಕೊಂಡರೆ ಇನ್ನಷ್ಟು ಬ್ಯಾಕ್ಟೀರಿಯಗಳು ಹಾಲಿನ ಪಾತ್ರೆಗೆ ಸೇರ್ಪಡೆಗೊಂಡಂತೆ. ಕ್ರಿಮಿ ಕೀಟಗಳು ಹಾಲಿನ ಪಾತ್ರೆಗೆ ಬೀಳುವ ಮೂಲಕ ಬ್ಯಾಕ್ಟೀರಿಯಗಳು ಹಾಲಿಗೆ ಸೇರಿಕೊಳ್ಳಬಹುದು. ಹಾಲಿಂಡುವ ವ್ಯಕ್ತಿ ಕಾಯಿಲೆಯಿಂದ ನರಳುತ್ತಿದ್ದಾನೆ/ಳೆ ಎಂದಿಟ್ಟುಕೊಳ್ಳೋಣ. ಬ್ಯಾಕ್ಟೀರಿಯಾ ಸೇರ್ಪಡೆಗೆ ಆ ವ್ಯಕ್ತಿಯ ಕೊಡುಗೆಯನ್ನೂ ಸಹ ನಾವು ತಳ್ಳಿಹಾಕುವಂತಿಲ್ಲ. ಇನ್ನು ಹಿಂಡಿದಂಥ ಹಾಲನ್ನು ಸಂಘಕ್ಕೆ ಕೊಂಡೊಯ್ಯುವಾಗ ಮುಚ್ಚದೆ ಕೊಂಡೊಯ್ಯಲಾಗಿದೆ ಎಂದಿಟ್ಟುಕೊಳ್ಳೋಣ. ದಾರಿಯುದ್ದಕ್ಕೂ ಹಾಲಿನ ಪಾತ್ರೆಗೆ ಧೂಳು ಸೇರಲು ಅದೆಷ್ಟು ಅವಕಾಶಗಳಿಲ್ಲ? ಅಂತೂ ಪ್ರತಿಯೊಂದು ಹಂತದಲ್ಲಿ ಉತ್ಪಾದಕರು ಹಾಲಿಗೆ ಮೇಲಿಂದ ಮೇಲೆ ಮತ್ತಷ್ಟು ಬ್ಯಾಕ್ಟೀರಿಯಗಳನ್ನು ಸೇರ್ಪಡೆಗೊಳ್ಳುವಂತೆ ಮಾಡುತ್ತಿದ್ದಾರೆ ಎಂದರೆ ಪ್ರಾಯಶಃ ಇದು ಸುಳ್ಳಲ್ಲ.

ಉತ್ಪಾದಕರ ಹಂತದಲ್ಲಿ ಹಾಲಿನೊಳಗೆ ಬ್ಯಾಕ್ಟೀರಿಯ ಸೇರ್ಪಡೆಗೊಳ್ಳಲು ನಮ್ಮಲ್ಲಿ ಲಭ್ಯವಿರುವ ಅವಕಾಶಗಳು ಮಾತ್ರ ಒಂದೆರಡಲ್ಲ, ಸಾಕಷ್ಟಿವೆ. ಆದರೆ ನೆನಪಿರಲಿ. **ಬ್ಯಾಕ್ಟೀರಿಯಗಳ ಸಂಖ್ಯೆ ಹಾಲಿನಲ್ಲಿ ಹೆಚ್ಚಾಗುತ್ತಾ ಸಾಗಿದಂತೆ ಅದು ಬೇಗನೆ ಕೆಡುತ್ತದೆ.** ಬೇಗನೆ ಕೆಡಬಲ್ಲ ಹಾಲನ್ನು ಹಣ ಕೊಟ್ಟು ಕೊಂಡುಕೊಳ್ಳಲು ಯಾವ ಗ್ರಾಹಕರು ತಾನೆ ಮುಂದೆ ಬಂದಾರು? ಅದೂ ಹತ್ತಾರು ಖಾಸಗಿ ಬ್ರ್ಯಾಂಡ್‌ಗಳ ಹಾಲು ಮಾರುಕಟ್ಟೆಯಲ್ಲಿ ಸಿಗುವ ಇಂದಿನ ಈ ಕಾಲದಲ್ಲಿ. ಬೇಗನೆ ಕೆಡಬಲ್ಲ ಹಾಲನ್ನು ಮೂಲೆಗುಂಪು ಮಾಡಬಲ್ಲ ಶಕ್ತಿ ನಮ್ಮ ಗ್ರಾಹಕರಿಗಿದೆ. ಒಂದು ವೇಳೆ ಹಾಗಾಗಿಬಿಟ್ಟರೆ ಪರಿಸ್ಥಿತಿ ಹೇಗಿರಬೇಡ. ಒಟ್ಟಾರೆ, ಉತ್ತಮ ವಹಿವಾಟಿನ ಲಕ್ಷಣ ಅದಂತೂ ಅಲ್ಲ. ಒಕ್ಕೂಟ ಇದರಿಂದ ಸಾಕಷ್ಟು ನಷ್ಟವನ್ನು ಅನುಭವಿಸಬೇಕಾಗುತ್ತದೆ. ಒಕ್ಕೂಟ ಅನುಭವಿಸುವ ನಷ್ಟ ಅದು ಸಂಘದ ನಷ್ಟ. ಸಂಘ ಅನುಭವಿಸುವ ನಷ್ಟ ಅದು ಉತ್ಪಾದಕರ ನಷ್ಟ.

ಉತ್ಪಾದಕರ ಹಂತದಲ್ಲಿ ಹಾಲಿಗೆ ಬ್ಯಾಕ್ಟೀರಿಯ ಸೇರ್ಪಡೆ ಗೊಳ್ಳುವುದನ್ನು ನಿಯಂತ್ರಿಸುವ ಸಲುವಾಗಿ ಕೋಮುಲ್ ಇಂದು ಹಲವಾರು ಚಟುವಟಿಕೆಗಳನ್ನು ಆಚರಣೆಗೆ ತಂದಿದೆ. ಈ ಪೈಕಿ ಪ್ರಮುಖ ಎನಿಸಿಕೊಂಡಿರುವ ಚಟುವಟಿಕೆಯೊಂದು ಇದೆ ಎನ್ನಬಹುದಾದರೆ ಅದು **"ಯಂತ್ರ ಬಳಸಿ ಹಾಲಿಂಡುವ ಸಲುವಾಗಿ ಸಂಘ ಮಟ್ಟದಲ್ಲಿ ನಿರ್ಮಿಸಲಾಗಿರುವ ಸಾಮೂಹಿಕ ಕೊಡುಗೋಣೆ."**

ಉತ್ಪಾದಕರೆಲ್ಲರೂ ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಒಂದು ನಿಗದಿತ ವೇಳೆಗೆ ಹಾಲುತ್ಪಾದನೆಯಲ್ಲಿರುವ ಪಶುಗಳನ್ನು ಸಂಘದ ಬಳಿ ಕರೆ ತರಬೇಕು. ಸಾಮೂಹಿಕ ಕೊಡುಗೋಣೆಯಲ್ಲಿ ಅವನ್ನು ನಿಲ್ಲಿಸಿ ಯಂತ್ರದ ಮೂಲಕ ಅಲ್ಲಿ ಹಾಲನ್ನು ಹಿಂಡಲಾಗುತ್ತದೆ. ಕೈ ಬಳಸಿ ಹಾಲಿಂಡುವ ಪದ್ಧತಿಯಲ್ಲಿ ನಾವು ಗಮನಿಸಬಹುದಾದ ಎಲ್ಲ ಲೋಪದೋಷಗಳಿಗೂ ನಾವಿಲ್ಲಿ ಗುಡ್ ಬೈ ಹೇಳಬಹುದು. ಬೆರಳನ್ನು ಇಲ್ಲಿ ಹಾಲಿಗೆ ಅದ್ದುವ ಪ್ರಮೇಯ ಉದ್ಭವವಾಗುವುದಿಲ್ಲ. ಕೆಚ್ಚಲನ್ನು ತೊಳೆದ ಬಳಿಕ ಕಲುಷಿತ ನೀರು ಹಾಲಿನ ಕ್ಯಾನಿಗೆ ಪ್ರವೇಶ ಮಾಡಲು ಇಲ್ಲಿ ಅವಕಾಶವಿಲ್ಲ. ಕರೆದ ಹಾಲು ಇಲ್ಲಿ ನೇರವಾಗಿ ಕ್ಯಾನಿನೊಳಗೆ ಮುಚ್ಚಿದ ಸ್ಥಿತಿಯಲ್ಲಿ ಸಂಗ್ರಹಗೊಳ್ಳುವುದರಿಂದ ಧೂಳು ಸಹ ಕ್ಯಾನನ್ನು ಪ್ರವೇಶ ಮಾಡಲು ಇಲ್ಲಿ ಸಾಧ್ಯವಿಲ್ಲ. ಕ್ರಿಮಿ-ಕೀಟಗಳಿಗೆ ಇಲ್ಲಿ ಕ್ಯಾನನ್ನು ಪ್ರವೇಶ ಮಾಡಲು ಸಾಧ್ಯವಾಗುವುದಿಲ್ಲ. ನೀರು ಬೆರೆಸುವ ಕೃತ್ಯದಿಂದ ಬ್ಯಾಕ್ಟೀರಿಯ ಹಾಲಿಗೆ ಸೇರಬಹುದಾದ ಅವಕಾಶಗಳಿಗೂ ಇಲ್ಲಿ ಕಡಿವಾಣ ಹಾಕಬಹುದು. ಅಂತೂ ಬ್ಯಾಕ್ಟೀರಿಯಗಳ ಸೇರ್ಪಡೆಯಿಂದ ಉಂಟಾಗಬಹುದಾದ ಹಾಲಿನ ಗುಣಮಟ್ಟದ ಕುಸಿತವನ್ನು ನಾವಿಲ್ಲಿ ನಿಯಂತ್ರಿಸಬಹುದು. ಈ ಮೂಲಕ ಹಾಲು ಕೆಡುವ ಅವಧಿಯನ್ನು ಮತ್ತಷ್ಟು ಮುಂದೂಡಬಹುದು. ಗ್ರಾಹಕರನ್ನು ಓಲೈಸಿಕೊಳ್ಳಬಹುದು.

ಕೈ ಬಳಸಿ ಹಾಲಿಂಡುವ ಪದ್ಧತಿಯಲ್ಲಿ ಬ್ಯಾಕ್ಟೀರಿಯಾಗಳ ಸೇರ್ಪಡೆಗೆ ಅದೆಷ್ಟು ಅವಕಾಶಗಳಿವೆ ಎಂಬುದರ ಬಗ್ಗೆ ಪ್ರಾಯಶಃ ಈಗ ನಿಮಗೆ ಮನದಟ್ಟಾಗಿರಬಹುದು. ಹೆಚ್ಚು ಕಾಲ ಹಾಲನ್ನು ಕೆಡದಂತೆ ಇಡಲು ಸಾಧ್ಯವಾಗದ ಸ್ಥಿತಿಗೆ ಅದಕ್ಕೆ ಸೇರ್ಪಡೆಗೊಂಡ ಬ್ಯಾಕ್ಟೀರಿಯಾಗಳೇ ಕಾರಣ ಎಂಬ ವಿಚಾರವೂ ನಿಮಗೀಗ ಸ್ಪಷ್ಟವಾಗಿರಬಹುದು. ಹಣ ಕೊಟ್ಟು ಕೊಂಡ ಹಾಲು ಬೇಗನೆ ಕೆಟ್ಟರೆ ಅದು ನಂದಿನಿ ವರ್ಚಸ್ಸಿಗೆ ಧಕ್ಕೆ ಉಂಟಾದಂತೆ ಎಂಬ ಅಂಶ ನಿಮಗೆ ನೆನಪಿರಲಿ. ಒಕ್ಕೂಟ ಇದರಿಂದ ನಷ್ಟ ಅನುಭವಿಸಬೇಕಾಗುತ್ತದೆ ಎಂಬುದಂತೂ ಸತ್ಯ. ಒಕ್ಕೂಟದ ನಷ್ಟ ಅದು ಉತ್ಪಾದಕರ ನಷ್ಟ. ನಂದಿನಿ ವರ್ಚಸ್ಸಿಗೆ ಧಕ್ಕೆಯಾಗಬಾರದು ಎಂಬ ಮನೋಭಾವನೆ ಉತ್ಪಾದಕರ ಹಂತದಿಂದ ಮೂಡಬೇಕು. ಯಂತ್ರ ಬಳಸಿ ಹಾಲಿಂಡುವ ಪದ್ಧತಿಯಿಂದ ಸಿಗುವ ಲಾಭವಾದರೂ ಏನು ಎಂಬ ಪ್ರಶ್ನೆಗೆ ಉತ್ತರ ಅದೇನೆಂಬುದು ನಿಮಗೀಗ ಮನದಟ್ಟಾಗಿರಬೇಕು ಅಲ್ಲವೇ?.

PDF Compressor Free Version




ಓದಿದ್ದು 10ನೇ ಕ್ಲಾಸು. ಈ ರೈತ ಮಹಿಳೆಯ ವಾರ್ಷಿಕ ಆದಾಯ ಐದು ಲಕ್ಷ ರೂ.ಗೂ ಅಧಿಕ!

ಸಾವಯವ ಕೃಷಿಯಲ್ಲಿನ ಇವರ ಅನುಭವ ಯಾವ ಪದವಿ, ಸ್ನಾತಕೋತ್ತರ ಪದವಿಗೂ ಕಡಿಮೆಯಿಲ್ಲ. ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಕೃಷಿ ಬಾನುಲಿ ಬೆಡಗು ಕಾರ್ಯಕ್ರಮದಲ್ಲಿ ಹಾಗೂ ಪ್ರಗತಿಪರ ರೈತರಿಗೆ ನೇರವಾಗಿ ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡುವ ಮಟ್ಟಿಗೆ ಅವರ ಜ್ಞಾನ ಶಾಖೆ ಬೆಳೆದಿದೆ.

ಇದೆಲ್ಲ ವಿಶಿಷ್ಟ ಸಾಧನೆಗಾಗಿ ಕೃಷ್ಣರಾಜನಗರ ತಾಲ್ಲೂಕಿನ ಹನುಮನಹಳ್ಳಿ ಕುಗ್ರಾಮದ ಇಂದಿರಮ್ಮ, ಅವರನ್ನು ಮೈಸೂರು ಕೃಷಿ ವಿಶ್ವವಿದ್ಯಾಲಯದಿಂದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ ಹುಡುಕಿಕೊಂಡು ಬಂದಿದೆ.

**ವೈವಿಧ್ಯಮಯ ಬೆಳೆ:** ಇವರಿಗಿರುವುದು ಮೂರೂವರೆ ಎಕರೆ ಕೃಷಿ ಜಮೀನು ಅದರಲ್ಲಿ ತೆಂಗು, ಬಾಳೆ, ಅಡಕೆ, ಭತ್ತದೊಂದಿಗೆ ಟೊಮೆಟೊ, ಮೆಣಸಿನಕಾಯಿ, ಕುಂಬಳಕಾಯಿ, ಕೋಸು, ಹಾಗಲಕಾಯಿಯಂಥ ತರಕಾರಿಗಳನ್ನೂ ಬೆಳೆದು ವಾರ್ಷಿಕ ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ. ಕುರಿ, ಹಸುಗಳನ್ನೂ ಸಾಕುತ್ತಾರೆ. ಮೇವಿಗಾಗಿ ಅಜೋಲವನ್ನೂ ಬೆಳೆಯುತ್ತಾರೆ. ಹೈನುಗಾರಿಕೆಯಲ್ಲೂ ಸೈ ಎನಿಸಿಕೊಂಡ ಮಹಿಳೆಯಿವರು.

**ಎರೆಹುಳು ಸಾಕಣೆ:** ತಮ್ಮ ತೋಟದಲ್ಲೆ ಸಾವಯವ ಗೊಬ್ಬರ ತಯಾರಿಸುವುದನ್ನು ರೂಢಿಸಿಕೊಂಡಿರುವ ಇಂದಿರಮ್ಮ, ತಮ್ಮ ಬೆಳೆಗಳಿಗೆ ಬಳಕೆ ಮಾಡಿಕೊಂಡು ಉಳಿದದ್ದನ್ನು ಕೆ.ಜಿ.ಗೆ 6 ರೂ.ನಂತೆ ಮಾರುತ್ತಾರೆ. ಗೊಬ್ಬರ ಮಾರಾಟದಿಂದಲೂ ಸಾಕಷ್ಟು ಆದಾಯ ಮಾಡಿಕೊಳ್ಳುವ ಇವರು, ಎರೆಹುಳುವನ್ನು ತೊಟ್ಟಿಗಳಲ್ಲಿ ಸಾಕುತ್ತಾರೆ. ಅವು ಕೆ.ಜಿ.ಗೆ 400 ರೂ.ಗಳಂತೆ ಮಾರಾಟವಾಗುತ್ತವೆ.

**ಉಳಿತಾಯ ಮಾರ್ಗ:** ಹಾಲು, ಸಾವಯವ ಗೊಬ್ಬರ ಮಾರಾಟ, ತೆಂಗು, ಅಡಿಕೆ ಸೇರಿದಂತೆ ಇನ್ನಿತರ ಬೆಳೆಗಳ ಮೂಲಕ ಆರ್ಥಿಕ ಲಾಭ ಗಳಿಸುತ್ತಿರುವ ಇಂದಿರಮ್ಮ, ಸಾವಯವ ಗೊಬ್ಬರ ಬಳಕೆಯಿಂದ ಕೃಷಿಗೆ ಮಿತವ್ಯಯದ ಮೂಲಕ ಹಣ ಉಳಿತಾಯದ ಮಾರ್ಗವನ್ನು ಕಂಡು ಕೊಂಡಿದ್ದಾರೆ.

**ಕೃಷಿ ಮಾಹಿತಿ :** ತೋಟಕ್ಕೆ ಭೇಟಿ ನೀಡುವ ತಾಲ್ಲೂಕಿನ ಹಲವು ಶಾಲೆಗಳ ಮಕ್ಕಳು ಮತ್ತು ಶಿಕ್ಷಕರಿಗೆ ತಾಲೂಕಿನ ನಾನಾ ಮಹಿಳಾ ಸಂಘದ ಸದಸ್ಯರಿಗೆ ಮತ್ತು ಅನುಪುಗಾರರಿಗೆ ಸಾವಯವ ಕೃಷಿ ಮತ್ತು ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ಮಾಹಿತಿ ನೀಡುತ್ತಾರೆ. ಒಂದರರ್ಥದಲ್ಲಿ ಈ ಭಾಗದ ಕೃಷಿ ಶಿಕ್ಷಕಿ ಇಂದಿರಮ್ಮ!

ಇವರ ಸಾವಯವ ಕೃಷಿ ಪದ್ಧತಿಯನ್ನು ಪರೀಕ್ಷಿಸಿದ ಕೃಷಿ ವಿಶ್ವ ವಿದ್ಯಾಲಯ 'ಅತ್ಯುತ್ತಮ ಕೃಷಿ ರೈತ ಮಹಿಳೆ' ಪ್ರಶಸ್ತಿ ನೀಡಿ ಗೌರವಿಸಿದೆ. ಮೈಸೂರು ಆಕಾಶವಾಣಿ 'ಹಸಿರು ಸಿರಿ' ಕಾರ್ಯಕ್ರಮದಲ್ಲಿ ರೈತರಿಗೆ ಮಾಹಿತಿ ನೀಡಿದ್ದಾರೆ. ಹಲವು ಸಂಘಸಂಸ್ಥೆಗಳು ಇವರ ಜ್ಞಾನ, ಶ್ರಮವನ್ನು ಗೌರವಿಸಿ ಪುರಸ್ಕರಿಸಿವೆ.

2003ರಲ್ಲಿ ಸುತ್ತೂರಿನಲ್ಲಿ ನಡೆದ ಕೃಷಿಮೇಳದಲ್ಲಿ ಸಾವಯವ ಗೊಬ್ಬರ ತಯಾರಿಸುವ ಬಗ್ಗೆ ಕಲಿತೆ. ಅದು ನನ್ನ ಕೃಷಿ ಜೀವನದ ಟರ್ನಿಂಗ್ ಪಾಯಿಂಟ್, ನನ್ನ ಯಶಸ್ಸು ಕಂಡು ಹಲವಾರು ರೈತರು ಸಾವಯವ ಗೊಬ್ಬರ ಬಳಕೆ, ತಯಾರಿಯಲ್ಲಿ ನಿರತರಾಗಿದ್ದಾರೆ. ಎರೆಹುಳು ಗೊಬ್ಬರ ನನ್ನ ಮತ್ತು ನನ್ನ ಕುಟುಂಬದ ಕೈಹಿಡಿದಿದೆ. ನನ್ನ ಪತಿ ನಾಗಭೂಷಣಾರಾಧ್ಯ ಹಾಗೂ ಮಗ, ಸೊಸೆ ಎಲ್ಲರೂ ಕೈಜೋಡಿಸಿದ್ದಾರೆ. ಎರೆಹುಳು ಗೊಬ್ಬರ ರಾಸಾಯನಿಕಕ್ಕಿಂತ ನೂರು ಪಾಲು ಮೇಲು ಎನ್ನುವುದು ನನ್ನ ಅನುಭವ. ನಾನು ವ್ಯಾಸಂಗದಲ್ಲಿ ಫೇಲ್ ಆದರೂ ಕೃಷಿಯಲ್ಲಿ ಪಾಸ್ ಆಗಿದ್ದೇನೆ ಎಂಬ ಹೆಮ್ಮೆ ಇದೆ. –ಇಂದಿರಮ್ಮ, ಪ್ರಗತಿಪರ ಕೃಷಿಕರು.

ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲೂಕಿನ ಹನುಮನಹಳ್ಳಿ ಕುಗ್ರಾಮದ ಇಂದಿರಮ್ಮ, ಸಾಧಿಸಿರುವ ಕೃಷಿ ಪ್ರಗತಿ ಎಂಥವರನ್ನೂ ಮಂತ್ರಮುಗ್ಧರಾಗಿಸುತ್ತದೆ. ಹೀಗಾಗಿಯೇ ಅವರನ್ನು ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ ಹುಡುಕಿಕೊಂಡು ಬಂದಿದೆ.



ಕೃಪೆ: ಸಂಯುಕ್ತ ಕರ್ನಾಟಕ, 17–9–2016

PDF Compressor Free Version



# ಹೆಚ್ಚು ಹಾಲು ನೀಡುವ ಹೈನುರಾಸುಗಳ ಆಯ್ಕೆ



ಹೈನೋದ್ಯಮ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿದೆ. ಆದರೆ ಹೈನೋದ್ಯಮದ ಅಂತರಾಳ ಅರಿಯದ ಹಲವರು ಕೈಸುಟ್ಟುಕೊಂಡಿದ್ದಾರೆ. ಯಶಸ್ವಿ ಹೈನೋದ್ಯಮಿ ಯಾಗಬೇಕಾದರೆ ಅದರ ಅಂತರಂಗ ಅರಿಯಬೇಕು. ಬಳಿಕ ಈ ಕ್ಷೇತ್ರಕ್ಕೆ ಪದಾರ್ಪಣೆ ಮಾಡಬೇಕು. ಹೈನುರಾಸುಗಳ ಆಯ್ಕೆಯಲ್ಲಿ ತೀರಾ ಎಚ್ಚರಿಕೆಯ ಹೆಜ್ಜೆ ಇಡಬೇಕು. ಹೈನುಗಾರಿಕೆ ಕೈಗೊಳ್ಳುವವರು ಎಂಥ ರಾಸು ಸಾಕಬೇಕು ಎಂಬ ಮಾಹಿತಿ ಇಲ್ಲಿದೆ.

ಲಾಭದಾಯಕ ಹೈನು ಉದ್ಯಮದಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸುವ ರೈತರ ಯಶಸ್ಸಿಗೆ ಉತ್ತಮ ತಳಿಗಳ ಆಯಕೆ ಪ್ರಮುಖವಾದ ಅಂಶವಾಗಿರುತ್ತದೆ. ಸಾಮಾನ್ಯವಾಗಿ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಹೆಚ್ಚು ಹಾಲು ಕರೆಯುವ ಮಿಶ್ರತಳಿ ಆಕಳುಗಳನ್ನು, ಜಾತಿ ಎಮ್ಮೆಗಳನ್ನು ಕೊಂಡು ತಂದು ಸಾಕುವುದು ಸಾಮಾನ್ಯ. ಆದರೆ ಲಾಭದಾಯಕ ಹೈನುಗಾರಿಕೆ ಕೈಗೊಳ್ಳಬೇಕಾದಾಗ ರಾಸುಗಳನ್ನು ಕೊಳ್ಳುವಾಗ ಸಾಕಷ್ಟು ಎಚ್ಚರ ಅಗತ್ಯ. ಮಧ್ಯವರ್ತಿಗಳ ಹಾವಳಿ ಅಥವಾ ಹೈನುಗಾರಿಕೆ ರಾಸುಗಳ ಆಯ್ಕೆಯಲ್ಲಿ ಜ್ಞಾನವಿಲ್ಲದ ಹಲವಾರು ರೈತರು ಕಡಿಮೆ ಗುಣಮಟ್ಟದ ರಾಸುಗಳನ್ನು ಆಯ್ಕೆಮಾಡಿಕೊಂಡು ನಷ್ಟವನ್ನು ಅನುಭವಿಸಿದ ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಆದ್ದರಿಂದ ಹೈನುರಾಸು ಕೊಳ್ಳುವ ಮುಂಚೆ ಈ ಅಂಶಗಳ ಬಗ್ಗೆ ಗಮನಹರಿಸಬೇಕು.

01. ಯಾವುದೇ ರಾಸುವನ್ನು ಖರೀದಿ ಮಾಡುವಾಗ ಆ ರಾಸು ನಮ್ಮ ಸ್ಥಳದ ಹವಾಗುಣಕ್ಕೆ ಹೊಂದಿಕೆ ಯಾಗುವಂತಿರಬೇಕು ಮತ್ತು ಉತ್ತಮ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವಂತಿರಬೇಕು.

02. ರೈತರು ಹೈನುರಾಸುಗಳನ್ನು ಖರೀದಿಸುವ ಮುನ್ನ ಹೈನುರಾಸುಗಳ ತಳಿಯನ್ನು ನಿರ್ಧರಿಸಬೇಕು ಹಾಗೂ ತಳಿಯ ಬಗ್ಗೆ ಪೂರ್ಣ ಮಾಹಿತಿಯನ್ನು ತಿಳಿದಿರಬೇಕು. ಹೈನು ತಳಿಯ ಆಯ್ಕೆ ಆ ಪ್ರದೇಶದಲ್ಲಿನ ಹಾಲಿನ ಬೇಡಿಕೆ ಹಾಗೂ ಮಾರುಕಟ್ಟೆ ಸೌಲಭ್ಯದ ಮೇಲೆಯೂ ಅವಲಂಬಿಸಿದೆ. ಕರ್ನಾಟಕದ ವಾತಾವರಣಕ್ಕೆ ಅಧಿಕ ಹಾಲು ಕೊಡುವ ಮಿಶ್ರತಳಿಗಳಾದ ಎಚ್‌ಎಫ್ ಮತ್ತು ಜರ್ಸಿ ಹೈನುರಾಸುಗಳು ಸೂಕ್ತ.

03. ರಾಸುಗಳ ವಯಸ್ಸನ್ನು ಮಧ್ಯವರ್ತಿಗಳು ಮೋಸ ಮಾಡುವ ಸಂಭವವಿರುವುದರಿಂದ ರಾಸುವಿನ ಹಲ್ಲನ್ನು ನೋಡಿ ವಯಸ್ಸನ್ನು ತಿಳಿಯುವುದು ಸೂಕ್ತ. ಸಾಮಾನ್ಯವಾಗಿ ಎರಡನೇ ಸೂಲಿನ ಹಸು ಮತ್ತು ಎಮ್ಮೆಯನ್ನು ಗರ್ಭಾವಸ್ಥೆಯ ಕೊನೆಯ ತಿಂಗಳಲ್ಲಿ ಅಥವಾ ಕರು ಹಾಕಿದ ಒಂದು ತಿಂಗಳಲ್ಲಿ ಖರೀದಿಸುವುದು ಉತ್ತಮ.

04. ಹೈನುರಾಸು ಕೊಳ್ಳುವಾಗ ರಾಸುವಿನಲ್ಲಿ ಪ್ರತ್ಯಕ್ಷವಾಗಿ ಕಾಣಸಿಗುವ ವಿಷಯಗಳೊಂದಿಗೆ ಅದರ ಹಿಂದಿನ ಸೂಲಿನ ಮಾಹಿತಿ ಹಾಗೂ ರಾಸುವಿನ ಸಂಬಂಧಿಗಳ ಮಾಹಿತಿಯೂ ಪರಿಗಣಿಸಿ ಆಯ್ಕೆ ಮಾಡಿದ್ದಲ್ಲಿ ಉತ್ತಮ ಹೈನುರಾಸುವನ್ನು ಆಯ್ಕೆ ಮಾಡಬಹುದು.

05. ಹಸುಗಳ ಇತಿಹಾಸ ಮತ್ತು ವಂಶಾವಳಿ ದಾಖಲೆ ಪರಿಶೀಲಿಸುವುದರಿಂದ ಅದರ ಉತ್ಪಾದಕತೆ ಕ್ಷಮತೆ ಬಗ್ಗೆ ತಿಳಿದುಕೊಳ್ಳಬಹುದು. ಹೈನುರಾಸು ಪ್ರಸ್ತುತ ಉತ್ಪಾದನಾ ಸಾಮರ್ಥ್ಯದೊಂದಿಗೆ ಉತ್ತಮ ಹೈನುಗಾರಿಕಾ ಅನುವಂಶೀಯ ಗುಣ ಹೊಂದಿರಬೇಕು. ಏಕೆಂದರೆ ಮುಂದಿನ ಪೀಳಿಗೆಯ ಕರುಗಳ ಉತ್ಪಾದನಾ ಸಾಮರ್ಥ್ಯ ತಾಯಿಯ ಅನುವಂಶೀಯ ಗುಣಗಳನ್ನು ಅವಲಂಬಿಸಿರುತ್ತವೆ.

06. ರಾಸು ಖರೀದಿ ಮಾಡುವಾಗ ಅದರ ಹಾಲಿನ ಇಳುವರಿ ತಿಳಿಯುವುದು ಬಹಳ ಮುಖ್ಯ. ಕೇವಲ ಒಂದು ಬಾರಿ ಹಾಲನ್ನು ಹಿಂಡಿ ಪರೀಕ್ಷಿಸುವುದಕ್ಕಿಂತ ಬೆಳಗ್ಗೆ, ಸಂಜೆ ಮತ್ತು ಮಾರನೆ ಬೆಳಗ್ಗೆ ಹೀಗೆ ಮೂರು ಬಾರಿಯಾದರೂ ಕರೆದು ದಿನ ಒಟ್ಟು ಉತ್ಪಾದನೆಯ ಬಗ್ಗೆ ಅಂದಾಜು ಮಾಡಿ ಖರೀದಿಸುವುದು ಸೂಕ್ತ.

07. ಹೈನುರಾಸುಗಳು ಮೂರು ಮತ್ತು 4ನೇ ಸೂಲಿನಲ್ಲಿ ಅತಿ ಹೆಚ್ಚು ಹಾಲನ್ನು ನೀಡುತ್ತದೆ. ಆದ್ದರಿಂದ ಹೊಸದಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲಿಚ್ಚಿಸುವವರು 2 ಅಥವಾ 3ನೇ ಸೂಲಿನಲ್ಲಿರುವಂಥ 2-4 ಶಾಶ್ವತ ಹಲ್ಲುಗಳುಳ್ಳ ಹಸುವನ್ನು ಕೊಳ್ಳುವುದು ಉತ್ತಮ. ತುಂಬು ಗರ್ಭದ ಹಸು ಅಥವಾ ಕರು ಹಾಕಿದ 10 ದಿನಗಳೊಳಗಿನ ಹಸುವನ್ನು ಖರೀದಿಸುವುದು ಅತಿ ಉತ್ತಮ.

08. ಹೈನುರಾಸುಗಳು ಶಾಂತ ಸ್ವಭಾವವನ್ನು ಹೊಂದಿರಬೇಕು. ಮೃದುವಾದ ಕೂದಲುಳ್ಳ ಸಡಿಲವಾದ ಮತ್ತು ಕಾಂತಿಯುಕ್ತ ಚರ್ಮ ಹೊಂದಿರಬೇಕು. ಹೈನುರಾಸುಗಳಿಗೆ ಶಕ್ತಿಯುತವಾದ ದವಡೆ, ಒಸಡು ಮತ್ತು ಹಲ್ಲುಗಳನ್ನು ಹೊಂದಿರಬೇಕು. ಕಾಂತಿಯುಕ್ತ ಕಣ್ಣುಗಳು, ವಿಶಾಲವಾದ ಮೂಗಿನ ಹೊಳ್ಳೆ ಹೈನುರಾಸುಗಳ ಆರೋಗ್ಯವನ್ನು ಸೂಚಿಸುತ್ತವೆ. ಕತ್ತು ಸಣ್ಣವಾಗಿದ್ದರೂ

PDF Compressor Free Version

ನೀಳವಾಗಿರಬೇಕು. ಬೆನ್ನು ಮಟ್ಟವಾಗಿರಬೇಕು. ಹೊಟ್ಟೆ ಮತ್ತು ಎದೆ ದೊಡ್ಡದಾಗಿರಬೇಕು. ರಾಸುವಿನ ಶರೀರವು ಕೊಬ್ಬಿನಿಂದ ತುಂಬಿರಬಾರದು. ಕಾಲುಗಳು ಗಿಡ್ಡವಾಗಿದ್ದು ನೇರವಾದ ಹಿಂಗಾಲು ಮತ್ತು ಸದೃಢವಾದ ಮುಂಗಾಲು ಮತ್ತು ಗಟ್ಟಿಯಾದ ಗೊರಸುಗಳಿರಬೇಕು.

09. ಅತಿ ದಪ್ಪ ಅಥವಾ ತೀರಾ ಸಣ್ಣಗಾತ್ರದ ಹಸುಗಳು ಹೈನುಗಾರಿಕೆಗೆ ಯೋಗ್ಯವಲ್ಲ. ನಾವು ಕೊಳ್ಳುವ ಹಸುವು ಮಧ್ಯಮ ಗಾತ್ರದ್ದಾಗಿರಬೇಕು. ಸರಾಗವಾಗಿ ಓಡಾಡಬೇಕು. ಕಾಲುಗಳ ಮಧ್ಯೆ ಸಾಕಷ್ಟು ಅಂತರವಿರಬೇಕು. ಎದೆ ವಿಶಾಲವಾಗಿದ್ದು ಸಾಕಷ್ಟು ದೊಡ್ಡದಾಗಿರಬೇಕು. ಹಾಲು ಕರೆದ ನಂತರ ಕೆಚ್ಚಲು ಕುಗ್ಗಬೇಕು.

10. ಹಸುವಿನ ಹಿಂಬದಿಯಿಂದ ನೋಡಿದಾಗ ನಮಗೆ ಪೂರ್ತಿ ಕೆಚ್ಚಲು ಕಾಣಬೇಕು. ಕೆಚ್ಚಲ ಮೇಲೆ ಮತ್ತು ಕೆಚ್ಚಲ ಮುಂದಿನ ರಕ್ತನಾಳಗಳು (ಹಾಲಿನ ನರ) ಕಣ್ಣಿಗೆ ಎದ್ದು ಕಾಣುವಂತೆ ದೊಡ್ಡದಾಗಿರಬೇಕು. ಕೆಚ್ಚಲ ಮೇಲೆ ತೊಟ್ಟುಗಳು ಸಮನಾಗಿರಬೇಕು. ಹಾಗೂ ಎಲ್ಲ ನಾಲ್ಕು ತೊಟ್ಟುಗಳಲ್ಲಿ ಹಾಲು ಬರುತ್ತಿದೆಯೆ ಎಂದು ಪರೀಕ್ಷಿಸಬೇಕು.

11. ರಾಸುಗಳ ಆಯ್ಕೆ ಮಾಡುವಾಗ ಹೈನುಗಾರಿಕೆಯ ಅಂಕಿ-ಅಂಶಗಳ ಪಾತ್ರವು ಕೂಡ ಮುಖ್ಯ. ಫಲಕ್ಕೆ ಬಂದ ದಿನ, ಕರು ಹಾಕಿದ ದಿನ, ಹಾಲಿನ ಉತ್ಪಾದನೆ, ವಯಸ್ಸು ಇತ್ಯಾದಿ ಅಂಕಿ-ಅಂಶಗಳು ಗಮನಿಸಿ ಆಯ್ಕೆ ಮಾಡಬೇಕು. ಈ ಮಾಹಿತಿ ಲಭ್ಯವಿಲ್ಲದಾಗ ದೇಹದ ಎತ್ತರ, ದೇಹದ ತೂಕ ಮುಂತಾದ ಅಂಶಗಳನ್ನು ಗಮನಿಸಬೇಕು.

**ಡಾ. ಸತೀಶ ಜಿ.ಎಂ.**

ಕೃಪೆ : ಕನ್ನಡ ಪ್ರಭ

### ಲಾಭದಾಯಕ ಉದ್ಯಮ

ರಾಸುಗಳನ್ನು ಖರೀದಿಸುವುದಕ್ಕಿಂತ ಮುಂಚೆ ಆ ರಾಸುವಿನ ಇತಿಹಾಸ ತಿಳಿಯುವುದು ಮುಖ್ಯ. ಗಬ್ಬ ಇರುವ ಅಥವಾ ಹಾಲು ಬತ್ತಿದ ಹಸುಗಳು ಕಡಿಮೆ ಬೆಲೆಗೆ ಸಿಕ್ಕರೂ ಆಯ್ಕೆ ಉಚಿತವಲ್ಲ. ಗಬ್ಬವಿರುವ ಹಸುಗಳಿಗೆ ಹಿಂದೆ ಬ್ರುಸೆಲ್ಲಾ ಇತ್ಯಾದಿ ಸೋಂಕು ತಗುಲಿದರೆ ಗರ್ಭಪಾತವಾಗುವ ಸಂಭವ ಜಾಸ್ತಿ. ಅದೇ ರೀತಿ ಬತ್ತಿಕೊಂಡ ಹಸುಗಳಲ್ಲೂ ಅದು ಮತ್ತೆ ಗರ್ಭ ಕಟ್ಟುವ ಬಗ್ಗೆ ಯಾವ ಕುರುಹು ಸಿಗದು. ಕರುಗಳ ಜನನದ ಅಂತರ 12-14 ತಿಂಗಳು ಅವಧಿಯದಾಗಿದ್ದಲ್ಲಿ ಹೆಚ್ಚಿನ ಕರುಗಳನ್ನು ಪಡೆಯಲು ಸಾಧ್ಯವಾಗುವುದರಿಂದ ಹೈನು ಉದ್ಯಮ ಲಾಭದಾಯಕವಾಗಿರುತ್ತದೆ.

ಕ್ಷೀರಸಾಗರ ಮಾಸಪತ್ರಿಕೆ
ರಾಜ್ಯ ಸಹಕಾರಿ ಹೈನುಗಾರರ ಮಾರ್ಗದರ್ಶಿ
ಕ್ಷೀರಸಾಗರ ಚಂದಾದಾರರಾಗಲು
ವಾರ್ಷಿಕ ಚಂದಾ ರೂ. : 50-00
ಆಜೀವ ಚಂದಾ ರೂ. : 900-00
ದ ಮೊತ್ತವನ್ನು ಚೆಕ್ ಅಥವಾ ಡಿಡಿಯನ್ನು Managing Director, KMF, Bangalore ರವರ ಹೆಸರಿಗೆ ಪಡೆದುಕೊಳ್ಳುವುದು.

ಪಡೆದುಕೊಂಡ ಡಿ.ಡಿಯನ್ನು ಹತ್ತಿರದ ಯಾವುದೇ ಶಾಖೆ, ಪೋಸ್ಟ್ ವಿಳಾಸ, ಪಿನ್‌ಕೋಡ್ ಮತ್ತು ಮೊಬೈಲ್ ನಂ.ಅನ್ನು ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು
ಸಂಪಾದಕರು, ಕ್ಷೀರಸಾಗರ ಪತ್ರಿಕೆ, ಕರ್ನಾಟಕ ಹಾಲು ಮಹಾಮಂಡಳಿ, ಕೆ.ಎಂ.ಎಫ್. ಕಾಂಪ್ಲೆಕ್ಸ್, ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು-560 029
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಸಾರ್ವಜನಿಕ ಸಂಪರ್ಕಾಧಿಕಾರಿ
ದೂರವಾಣಿ: 9591170922, 080-26096849
ಕ್ಷೀರಸಾಗರ ಪತ್ರಿಕೆಯಲ್ಲಿ ಪ್ರಕಟಿಸಲು ಉತ್ತಮ ಲೇಖನಗಳನ್ನು ನಿರೀಕ್ಷಿಸಲಾಗುತ್ತದೆ ಇಮೇಲ್ ಮೂಲಕ pro@kmf.coop ಗೆ ಕಳುಹಿಸಿ ಕೊಡಲು ಕೋರಿದೆ.

PDF Compressor Free Version

# ಗ್ರಾಹಕರಿಗೆ "ನಂದಿನಿ ಉತ್ಪನ್ನ"ಗಳ ಪ್ರದರ್ಶನ ಹಾಗೂ ಅರಿವು ಕಾರ್ಯಕ್ರಮ





ದಿನಾಂಕ: 14-11-2016 ರಿಂದ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆಯುತ್ತಿರುವ India International Trade Fair (IITF) ನಲ್ಲಿ ಆಯೋಜಿಸಿರುವ ನಂದಿನಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಕಾರ್ಯಕ್ರಮವನ್ನು Resident Commisioner ಕರ್ನಾಟಕ ಭಾವನ ರಾದ ಶ್ರೀ ಅತುಲ್ ಕುಮಾರ್ ತಿವಾರಿರವರು ಉದ್ಘಾಟಿಸಿದರು. IITFನಲ್ಲಿ ನಡೆದ ಕಾರ್ಯಕ್ರಮದ Agriculture Pevilion ನಲ್ಲಿ ಉತ್ಪನ್ನಗಳ ಪ್ರದರ್ಶನ ಹಾಗೂ Karnataka Pevilionನಲ್ಲಿ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಕಹಾಮದ ಸಗಟು ವಿತರಕರಾದ ಕರ್ನಾಟಕ ಫುಡ್ ಸೆಂಟರ್ (KFC) ದೆಹಲಿ ಇವರು ಆಯೋಜಿಸಿರುತ್ತಾರೆ. ಮೇಳಕ್ಕೆ ಆಗಮಿಸಿದ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.



ನವೆಂಬರ್ 3 ರಿಂದ 5 ನೇ ತಾರೀಖಿನವರೆಗೂ ಮೂರು ದಿನಗಳ ಕಾಲ ನಡೆದ ಪ್ರಖ್ಯಾತ **"ಹಂಪಿ ಉತ್ಸವ"**ದಲ್ಲಿ ಗ್ರಾಹಕರಲ್ಲಿ ಅರಿವು ಮೂಡಿಸುವ ಸಲುವಾಗಿ ಬಳ್ಳಾರಿ ಮಾರಾಟ ಮಳಿಗೆಯ ವತಿಯಿಂದ ಏರ್ಪಡಿಸಿದ್ದ ನಂದಿನಿ ಉತ್ಪನ್ನಗಳ ಪ್ರದರ್ಶನ ಹಾಗೂ ಶೇ 10%ರ ರಿಯಾಯಿತಿ ದರದಲ್ಲಿ ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವ ಕಾರ್ಯಕ್ರಮನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ರಾಯಚೂರು-ಬಳ್ಳಾರಿ, ಕೊಪ್ಪಳ ಸಹಕಾರಿ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಿ. ಸತ್ಯನಾರಾಯಣ ರವರು ಉದ್ಘಾಟಿಸಿದರು ನಂದಿನಿ ಉತ್ಪನ್ನಗಳ ಬಗ್ಗೆ ಬಳ್ಳಾರಿ ಮಾರಾಟ ಮಳಿಗೆಯ ಮುಖ್ಯಸ್ಥರಾದ ಶ್ರೀ ಶಿವೇಸ್ವಾಮಿಯವರು ಗ್ರಾಹಕರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಸಾರ್ವಜನಿಕರು ಈ ಬಗ್ಗೆ ಹರ್ಷ ವ್ಯಕ್ತಪಡಿಸಿದರು.




ದಿನಾಂಕ 14-11-2016 ರಂದು ನಡೆದ ಮಕ್ಕಳ ದಿನಾಚಾರಣೆ ಅಂಗವಾಗಿ ಬೆಂಗಳೂರಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನಡೆದ **"ಮಕ್ಕಳ ಹಬ್ಬ-2016"** ಪ್ರಯುಕ್ತ ಬೆಂಗಳೂರು ಮಾರಾಟ ಮಳಿಗೆಯವರು ಆಯೋಜಿಸಿದ ನಂದಿನಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಯಲ್ಲಿ ಗ್ರಾಹಕರೊಬ್ಬರು ಉತ್ಪನ್ನಗಳನ್ನು ವೀಕ್ಷಿಸುತ್ತಿರುವುದು.

**ಡಾ. ಬಸವರಾಜ್**
ಜಂಟಿ ನಿರ್ದೇಶಕರು, (ಎಸ್&ಡಿ)
ಕ.ಹಾ.ಮ., ಬೆಂಗಳೂರು.
ಮೊಬೈಲ್ ನಂ.: 9591994342



Printed at : B.M. Ganapathy, Published by: Sri Rakesh Singh, I.A.S., Managing Director KMF on behalf of Karnataka Co-operative Milk Producers Federation Ltd., and Printed at Raja Printers, # 69, 4th Cross, Lalbagh Road, K.S. Garden, Bangalore-560 027, Ph.: 22234066, email: rajaprinters@gmail.com and Published at Karnataka Co-operative Milk Producers Federation Ltd., KMF Complex, Dr. Marigowda Road, Bangalore-560 029. Editor : Dr. Suresh Babu, Director, A.H.

ಹೈನುಗಾರಿಕೆ ಲಾಭದಾಯಕ್ಕೆ-ಒಂದು ವರ್ಷಕ್ಕೆ ಒಂದು ಕರು ಹಾಕುವಂತೆ ಹಸು/ಎಮ್ಮೆಗಳನ್ನು ಆರೋಗ್ಯವಾಗಿ ಸಾಕುವುದು ಮತ್ತು ಸರಿಯಾದ ಸಮಯಕ್ಕೆ ಕೃತಕ ಗರ್ಭಧಾರಣೆ ಮಾಡಿಸುವುದು